ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ : ಸಂಸದೀಯ ವ್ಯವಹಾರಗಳ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ತಿದ್ದುಪಡಿ) ವಿಧೇಯಕ, 1991 ತಿದ್ದುಪಡಿ ಮಾಡಲ್ಪಟ್ಟಂತೆ ಸಭೆಯು ಅಂಗೀಕರಿಸಬೇಕು ಎಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಕರ್ನಾಟಕ ರಾಜ್ಯ ಸಿವಿಲ್ ಸೇವಾ (ತಿದ್ದುಪಡಿ) ವಿಧೇಯಕ, 1991ತಿದ್ದುಪಡಿ ಮಾಡಿರುವಂತೆ ಸಭೆಯು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1991ರ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ : ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, 1991ರ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ನಾನು ಇದಕ್ಕೆ ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಮಸೂದೆ 1991ರ ವಿಧೇಯಕ, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ 84 (2) ಎ ನಿಯಮದ ಪ್ರಕಾರ ಪರಿಷತ್ತಿನ ಸಮ್ಮತಿಯನ್ನು ಪಡೆದು ಸದನದ ಸಂಯುಕ್ತ ಸಮಿತಿಗೆ ಉಲ್ಲೇಖಿಸಬೇಕೆಂದು ಸದನವು ತೀರ್ಮಾನಿಸುತ್ತದೆ ಹಾಗೂ ಸದರಿ ಸಮಿತಿಗೆ ಈ ಸದನದ ಕೆಳಕಂಡ ಸದಸ್ಯರನ್ನು ನೇಮಿಸಬೇಕೆಂದು ಸಹ ತೀರ್ಮಾನಿಸುತ್ತದೆ ಎಂಬ ನಮ್ಮದೊಂದು ತಿದ್ದುಪಡಿ ಇದೆ. ಇದಕ್ಕೆ 8 ಜನ ಸದಸ್ಯರ ಹೆಸರುಗಳನ್ನು ಸಹ ಸೂಚನೆ ಮಾಡಿದ್ದೇನೆ. ಇಲ್ಲಿ ಮುಖ್ಯವಾಗಿ ಈ ಆಡಳಿತ ಸುಧಾರಣೆ ಬಗ್ಗೆ ಹೇಬೇಕೆಂದರೆ ಈ ರಾಜ್ಯದ ಅತ್ಯಂತ ಶ್ರೇಷ್ಠ ಆಡಳಿತಗಾರರಾದ ಶ್ರೀ ಕೆಂಗಲ್ ಹನಮಂತಯ್ಯನವರಿಗಿಂತ ಮತ್ತೊಬ್ಬ ದೊಡ್ಡ ಆಡಳಿತಗಾರರನ್ನು ನಾವಿನ್ನೂ ಕಾಣಲಿಲ್ಲ ಅಂದರೆ ತಾವು ಮತ್ತು ಈ ಸದನದ ಎಲ್ಲಾ ಸದಸ್ಯರು ಒಪ್ಪುತ್ತಾರೆಂದು ನಾನು ಭಾವನೆ ಮಾಡಿದ್ದೇನೆ. ಅವರು ಸುಮಾರು 24 ಸಹಸ್ರ ಪುಟಗಳ ಆಡಳಿತ ಸುಧಾರಣೆಗಾಗಿಯೇ ಒಂದು ದೊಡ್ಡ ಗ್ರಂಥವನ್ನು ಬರೆದು ಪ್ರಕಟಿಸಿದ್ದಾರೆ. ಅನೇಕ ವಿಚಾರಗಳನ್ನು ಆ ಗ್ರಂಥದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮೊದಲು ಇಂತಹ ಒಂದು ಆಡಳಿತ ಸುಧಾರಣೆಗಾಗಿ ರಾಷ್ಟ್ರಮಟ್ಟದಲ್ಲಿ ಶ್ರೀಮಾನ್ ಮುರಾರ್ಜಿ ದೇಸಾಯಿರವರ ನೇತೃತ್ವದಲ್ಲಿ ಸಮಿತಿಯನ್ನು ರಚನೆ ಮಾಡಿದರು. ಅದರಲ್ಲಿ ಸದಸ್ಯರಾಗಿ ಕೆಲಸ ಮಾಡಿದಂತಹ ದಿವಂಗತ ಕೆಂಗಲ್ ಹನುಮಂತಯ್ಯನವರು ಆಮೇಲೆ ಅದೇ ಸಮಿಯಿಯ ಅಧ್ಯಕ್ಷರಾಗಿ ಈ ರಾಷ್ಟ್ರಕ್ಕೆ ಅತ್ಯಮೂಲ್ಯವಾದಂಥ ಕೊಡುಗೆಯನ್ನು ಕೊಟ್ಟಿದ್ದಾರೆ. ಆದರೆ ಅದರ ಪರಿಣಾಮವೇನು? ಅವರು ಏನೋ ಆಡಳಿತಾ ಸುಧಾರಣೆಯನ್ನು

ಕೊಟ್ಟರು. ಆದರೆ ಅಲ್ಲಿಂದೀಚೆಗೆ ಅವರ ನೆರಳಿನಲ್ಲಿ ಬೆಳೆದು ಬಂದಂತಹ ಪೀಳಿಗೆ ಎಷ್ಟರಮಟ್ಟಿಗೆ ಈ ಸುಧಾರಣೆಯನ್ನು ನಮ್ಮ ಆಡಳಿತದಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದೆ ಎನ್ನುವುದನ್ನು ಸ್ವಲ್ಪ ಹಿಂದೆ ತಿರುಗಿ ನೋಡಿದರೆ ಗೊತ್ತಾಗುತ್ತದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಈ ಸುಧಾರಣೆಗಾಗಿ ಬಹುಶಃ ನನ್ನ ತಿಳುವಳಿಕೆಗೆ ಬಂದಹಾಗೆ ದೇಶದ ಯಾವ ರಾಜ್ಯವೂ ಮಾಡದೆ ಇರತಕ್ಕ ಒಂದು ಸುಧಾರಣೆಯನ್ನು ರಾಜ್ಯದಲ್ಲಿ ತರತಕ್ಕಂತಹ ಒಂದು ಪ್ರಯತ್ನವನ್ನು ಮೊದಲು ಇಲ್ಲಿ ಮಾಡಿದ್ದಾರೆಂದು ನನಗೆ ಅನ್ನಿಸುತ್ತೇದೆ. ಇದಕ್ಕೆ ಪೂರ್ವಭಾವಿಯಾಗಿ 1-3-91ರಲ್ಲಿ ರಾಜ್ಯ ವಿಧಾನ ಮಂಡಲದಲ್ಲಿ ಕರ್ನಾಟಕ ರಾಜ್ಯದ ರಾಜ್ಯಪಾಲರು ತಮ್ಮ ಭಾಷಣವನ್ನು ದಯಪಾಲಿಸುತ್ತಾ ಪುಟ 17ರಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಬಳಸಿರತಕ್ಕ ಭಾಷೆ ಈ ರೀತಿಯಿದೆ. "ಆಡಳಿತವು ಸೌಜನ್ಯ ಪೂರ್ಣವಾಗಿರುವಂತೆ ಜವಾಬ್ದಾರಿಯುತವಾಗಿರುವಂತೆ ಮತ್ತು ಸ್ಪಂಧಿಸುವಂತೆ ಮಾಡುವುದು" ಅರ್ಥಾತ್ ಈ ಸರ್ಕಾರದವರು ಈಗಿರತಕ್ಕ ಆಡಳಿತ ವ್ಯವಸ್ಥೆ ಸೌಜನ್ಯ ಪೂರ್ಣವಾಗಿಲ್ಲ ಎನ್ನತಕ್ಕ ಮಾತನ್ನು ಒಪ್ಪಿಕೊಳ್ಳುತ್ತಾರೆ. ಈಗಿರತಕ್ಕ ಆಡಳಿತ ಜನರ ಭಾವನೆಗಳಿಗೆ ಸ್ಪಂಧನ ಮಾಡುತ್ತಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಹಾಗೆಯೇ ಈಗಿನ ಆಡಳಿತ ಜವಾಬ್ದಾರಿಯುತವಾಗಿಲ್ಲ ಎನ್ನತಕ್ಕ ಮಾತನ್ನು ಒಪ್ಪಿಕೊಂಡು ಅದಕ್ಕಾಗಿ ಒಂದು ಪಂಚಸೂತ್ರದ ಕಾರ್ಯಕ್ರಮವನ್ನು ಹಾಕಿ ಸರಳ ಕಾರ್ಯವಿಧಾನವನ್ನು...

ಶ್ರೀ ಕೆ.ಹೆಚ್. ರಂಗನಾಥ್ : ಹಿಂದಿನ ಸರ್ಕಾರದಲ್ಲಿ ಆಡಳಿತ ಚೆನ್ನಾಗಿ ಇರಲಿಲ್ಲವೇ ?

ಶ್ರೀ ಹೆಚ್. ಏಕಾಂತಯ್ಯ : ಈಗ ಬಹಳ ಚೆನ್ನಾಗಿ ಇದೆ ಎಂದರೆ ನಮ್ಮದೇನು ತಕರಾರು ಇಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : 1988ರಲ್ಲಿ ಇದು ರೆಫರ್ ಆಗಿದ್ದಕ್ಕೆ ಅನುಮತಿ ಕೊಡಲಿಲ್ಲ. 1989ರಲ್ಲಿ ಗೌರ್‍ನರ್ ಅವರು ಅನುಮತಿ ಕೊಟ್ಟರು ಎಂದು ತಮ್ಮ ಒಂದು ಪ್ರಶ್ನೆಗೆ ಇಂದ ಬೆಳಿಗ್ಗೆ ಗೃಹಮಂತ್ರಿಗಳು ಉತ್ತರ ಕೊಡುತ್ತಾ ತಿಳಿಸಿದರು.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಹಿರಿಯ ಸದಸ್ಯರಿದ್ದೀರಿ. ನನ್ನ ಪ್ರಾರ್ಥನೆ ಇಷ್ಟೆ.

ಶ್ರೀ ಹೆಚ್. ಏಕಾಂತಯ್ಯ : ನಮಗೆ ನಂಬಿಕೆ ಇರಲಿಲ್ಲ, ಕೊಟ್ಟಿರಲಿಲ್ಲ. ನಿಮಗೆ ನಂಬಿಕೆಯಿದ್ದೂ ಸಹ ಏಕೆ ಹಿಂದಕ್ಕೆ ತೆಗೆದುಕೊಂಡಿರಿ.

ಶ್ರೀ ಕೆ.ಹೆಚ್. ರಂಗನಾಥ್ : ಇಲ್ಲಿ ಹಿರಿಯರು ಕಿರಿಯರು ಎಂಬ ಪ್ರಶ್ನೆ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಹಿರಿಯ ಸದಸ್ಯರು ಮಾತ್ರ ಅಲ್ಲ, ಅನುಭವಿ ಆಡಳಿಗಾರರಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್ : 91ರ ಅಕ್ಟೋಬರ್ ಮೊದಲನೆಯ ದಿವಸ ಮಾತನಾಡುತ್ತೇವೆಂದು ಹೇಳಿ, ಈಗ ಇರುವುದು ಚೆನ್ನಾಗಿಲ್ಲ ಎಂದು ಹೇಗೆ ಅರ್ಥಮಾಡುವುದಕ್ಕೆ ಆಗುತ್ತದೆ. ಹಾಗಿದ್ದರೆ ಅದಕ್ಕಿಂತ ಹಿಂದೆ ಯಾವುದೂ ಚೆನ್ನಾಗಿ ಇಲ್ಲ ಎಂದು ಹೇಳುವುದಕ್ಕೆ ಬರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಮ್ಮ ಅಭಿಪ್ರಾಯವನ್ನು ಈಗಿನ ಆಡಳಿತಕ್ಕೇ ಬಿಟ್ಟು ಬಿಡುತ್ತೇನೆ. ಯಾವ ರೀತಿ ಅನುಕೂಲವಾಗುತ್ತದೋ ಅವರಿಗೆ ಅನುಕೂಲವಾಗುವಂತೆ ಅರ್ಥೈಸಿಕೊಳ್ಳಲಿ. ಆದರೆ ಯಾರ ಸರ್ಕಾರವೂ ಕೂಡ ತನ್ನ ಆಡಳಿತ ಸೌಜನ್ಯಯುತವಾಗಿ ಇರಲಿಲ್ಲ, ತನ್ನ ಆಡಳಿತ ಜನರ ನಿರೀಕ್ಷಣೆಗೆ ಸ್ಪಂಧಿಸುತ್ತಾ ಇರಲಿಲ್ಲ ಎಂದು ಹೇಳಿ ಒಪ್ಪಿಕೊಂಡಿದ್ದು ಇಲ್ಲ. ಹೀಗೆ ಒಪ್ಪಿಕೊಳ್ಳತಕ್ಕಂಥ ನಿಮ್ಮ ಪ್ರಮಾಣಿಕತೆಯನ್ನು ನಾನು ಮೆಚ್ಚುತ್ತೇನೆ. It is a naked truth. ಅದನ್ನು ಒಪ್ಪಿಕೊಳ್ಳುತ್ತೇನೆ. ಹಾಗೆ ಒಪ್ಪಿಕೊಂಡು ಪಂಚಸೂತ್ರಕ್ಕೆ ಸಾರ್ವಜನಿಕ ಜವಾಬ್ದಾರಿರಾಗಿರತಕ್ಕದ್ದು ಗ್ರಾಮದಿಂದ ರಾಜ್ಯಮಟ್ಟದವರೆಗೆ ಮೇಲ್ವಿಚಾರಣೆ ಮಾಡುವುದು ಏನಿದೆ, ಈಗ ಇದು ಯಾವುದು ಇಲ್ಲ. ಸಾರ್ವಜನಿಕರ ಕುಂದು ಕೊರತೆಗಳಿಗೆ ಪರಿಹಾರ, ಈ ಎಲ್ಲಾ ಹೊಣೆಗಾರಿಕೆಯನ್ನು ನಿರ್ಣಯ ಮಾಡತಕ್ಕ ನಿರೂಪಣೆ ಮಾಡತಕ್ಕ ನಿರ್ಧಿಷ್ಟವಾದಂತಹ ಅಭಿಪ್ರಾಯವನ್ನು ಅಭಿವ್ಯಕ್ತ ಮಾಡತಕ್ಕ ಒಂದು ಮಸೂದನೆಯನ್ನು ತರಬೇಕು ಎನ್ನತಕ್ಕದ್ದು ನಿಮ್ಮ ಸರ್ಕಾರದ ಅನಿಸಿಕೆ.

ನಾವು ಈ ವಿಚಾರವನ್ನು ಚರ್ಚೆ ಮಾಡುವಾಗ ಮೊದಲು ಆತ್ಮಶೋಧನೆ ಮಾಡಿಕೊಳ್ಳುವುದು ಒಳ್ಳೆಯದು. ನಾವೆಲ್ಲಾ ರಾಜಕಾರಣಿಗಳು ; ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವಂಥವರು. ನಮ್ಮ ನಿರೀಕ್ಷೆಗೆ ಆಡಳಿತ ಬರಬೇಕು, ಜನರ ನಿರೀಕ್ಷೆಗೆ ಆಡಳಿತ ಕೆಲಸ ಮಾಡಬೇಕು ಎನ್ನುವುದನ್ನು ಹೇಳುವಾಗ ನಾವು ಇಂಥ ಆಡಳಿತ ನಿರ್ಭಾಧಿತವಾಗಿ ಕೆಲಸ ಮಾಡುವುದಕ್ಕೆ ಬಿಟ್ಟಿದ್ದೇವೆಯೇ? ಅಬಾಧಿತವಾಗಿ ಅದು ಕಲಸ ಮಾಡುವಂಥ ವ್ಯವಸ್ಥೆ ಈಗ ಇದೆಯೇ? ಪ್ರತಿ ಹಂತದಲ್ಲೂ, ಪ್ರತಿ ಹೆಜ್ಜೆಯಲ್ಲೂ ಈ ರಾಜಕೀಯದ ಪ್ರವೇಶ ಇದೆ. ನಾವು ನ್ಯಾಯಾಂಗ, ರಾಜ್ಯಾಂಗ ಮತ್ತು ಕಾರ್ಯಾಂಗಗಳನ್ನು ಭಿನ್ನ ಭಿನ್ನವಾದ ವಾಟರ್‌ಟೈಟ್ ಕಂಪಾರ್ಟ್‌ಮೆಂಟಿನಲ್ಲಿ ಇಟ್ಟು ಕೆಲಸ ಮಾಡುವುದಕ್ಕೆ ಸಾಧ್ಯವಾಗದಿದ್ದರೂ ಒಂದಕ್ಕೊಂದು ಪೂರಕವಾಗಿ, ಪ್ರೇರಕವಾಗಿ ಇದ್ದರೂ ಕೂಡ, ಇವತ್ತಿನ ಆಡಳಿತ ಸಂಪೂರ್ಣವಾಗಿ ಚುನಾಯಿತ ಪ್ರತಿನಿಧಿಗಳ ಹತೋಟಿಗೆ ಸಿಕ್ಕಿ ನರಳುತ್ತಿದೆ ಎನ್ನುವುದನ್ನು ಮೊದಲು ನಾವು ಒಪ್ಪಿಕೊಂಡರೆ, ಈ ಆಡಳಿತದಲ್ಲಿ ಸುಧಾರಣೆ ತರುವುದಕ್ಕೆ ಸಾಧ್ಯ. ಬಹಳ ಮುಖ್ಯವಾದ ಸುಧಾರಣೆ ಬರಬೇಕಾದದು ಅಂದರೆ The political interference in the Administration to what extent it has gone.

ಎಷ್ಟು ದೂರಕ್ಕೆ ಇದು ಹೋಗಿದೆ ಎನ್ನುವುದನ್ನು ನಾನು ಬಿಡಿಸಿ ಬಿಡಿಸಿ ಹೇಳಬೇಕಾದರೆ ಬಹಳ ದೀರ್ಘವಾದ ಸಮಯ ಬೇಕಾಗುತ್ತದೆ. ಆದ್ದರಿಂದ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಏನಾಗಿದೆ ಎಂದರೆ, ಶಾಸಕ ಹೇಳುವವರೇ ಅಸಿಸೆಂಟ್ ಕಮೀಷನರ್ ಆಗಬೇಕು, ಶಾಸಕ ಹೇಳುವವರೇ ತಹಶೀಲ್ದಾರ್ ಆಗಬೇಕು, ಕೊನೆಗೆ ಶಾಸಕ ಹೇಳುವವರೇ ಜವಾನಿ ಕೂಡ ಆಗಬೇಕು ಎನ್ನುವಷ್ಟು ಮಟ್ಟಿಗೆ ರಾಜಕೀಯ ಆಡಳಿತದಲ್ಲಿ ಸೇರಿ ಹೋಗಿದೆ. ವಿರೋಧ ಪಕ್ಷವನ್ನು ಹೊರತು ಪಡಿಸಿ ನಾನು ಇದನ್ನು ಹೇಳುತ್ತಿಲ್ಲ; ಈ ಅಧಿಕಾರಿ ಯಾವ ರೀತಿ ಕೆಲಸ ಮಾಡುತ್ತಿದ್ದಾನೆ ಎಂದು ಅಳೆಯುವುದಕ್ಕೆ ಯಾವುದಾದರೂ ಮಾನದಂಡ ಇದೆಯೇ? ಯಾವುದಾದರೂ ಮಾನದಂಡವನ್ನು ನಾವು ನಿಗದಿ ಮಾಡಿದ್ದೇವೆಯೇ? ನಾನು ಹೇಳಿದ ಅಧಿಕಾರಿ ಪ್ರಾಮಾಣಿಕ, ನಾನು ಹೇಳದಿದ್ದರೆ ಅವನು ಅಪ್ರಾಮಾಣಿಕ ಎಂದು ಆಗಿದೆ. ಅದಕ್ಕಾಗಿ ಬೇಕಾದಷ್ಟು ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ, ವಿಚಾರವನ್ನು ಮಾಡುವುದಕ್ಕೆ. ಆ ವ್ಯವಸ್ಥೆಗಳು ಕೂಡ ಅವಸ್ಥೆಗಳಾಗಿ ಉಳಿದು ಬಿಟ್ಟಿವೆ. ಆದುದರಿಂದ ನಾವು ಶಾಸನವನ್ನು ಮಾಡುವಾಗ, ಅದು ಬರಿಯ ಕಲ್ಲಿನ ಮೇಲೆ ಕೆತ್ತತಕ್ಕಂಥ ನಿರ್ಜೀವವಾದ

ಶಾಸನಗಳು ಆಗಬಾರದು. ಪ್ರಾಮಾಣಿಕವಾದ ಚಿಂತನೆ ಅಗತ್ಯವೆಂದು ಕಂಡು ಬಂದರೆ, ಮೊದಲು ನಮ್ಮನ್ನು ನಾವು ಅದರಲ್ಲಿ ತೊಡಗಿಸಿ ಯಾವ ರೀತಿ ಮಾಡಬೇಕೆಂದು ನೋಡಬೇಕು. ಇದರ ಬಗ್ಗೆ ತಜ್ಞರನ್ನು ಕೇಳಬೇಕಾದ್ದು ಇಲ್ಲ. ಹಿಂದಿನ ಆಡಳಿತವನ್ನು ನೋಡಿದರೆ ನಾವು ಕಲಿತುಕೊಳ್ಳಬಹುದು. ಬಹುಶ: ಹನುಮಂತಯ್ಯನವರ ಆಡಳಿತ ಅದಕ್ಕೆ ಒಂದು ಉದಾಹರಣೆ. ಹನುಮಂತಯ್ಯನವರ ಆಡಳಿತವನ್ನು ನೋಡಿದಂಥವರ ಪೈಕಿ ಕೆಲವೇ ಕೆಲವು ಮಂದಿ ಇದ್ದಾರೆ. ಅದರಲ್ಲಿ ಹುಚ್ಚಮಾಸ್ತಿಗೌಡರು ಒಬ್ಬರೆಂದು ನಾನು ತಿಳಿದಿದ್ದೇನೆ. ಏಕೆಂದರೆ ಆ ಕಾಲಕ್ಕೆ ಅವರು ಕಾಂಗ್ರೆಸ್ ಪಕ್ಷದ ಸಚೇತಕರಾಗಿ ಕೆಲಸ ಮಾಡುತ್ತಿದ್ದರು. He was the whip of the Party-if I am correct. ಈಗ ವಿಪೆಗೆ ಇರುವಷ್ಟು ಅನುಕೂಲಗಳು ಆಗ ಇರಲಿಲ್ಲ. ಆಗ ಚಾಟಿ ಹೊಡೆದು ಜನರನ್ನು ಕರೆದುಕೊಂಡು ಬಂದು ಕೂರಿಸುವ ಕೆಲಸ ವಿಪ್‌ಗೆ ಇರಲಿಲ್ಲ. ಇವತ್ತು ವಿಪ್ ಕೆಲಸ ಏನೆಂದರೆ, ಶಾಸನ ಸಭೆಗೆ ಸದಸ್ಯರನ್ನು ಕರೆದುಕೊಂಡು ಬಂದು ಕೂರಿಸುವುದು ಎನ್ನುವಂತಾಗಿದೆ. ಆ ಸ್ಥಿತಿಗೆ ನಾವು ಅವರನ್ನು ಕರೆದುಕೊಂಡು ಹೇಗಿದ್ದೇವೆ. ಆದ್ದರಿಂದ ಈಗ ಆಗಿರುವ ದೋಷಗಳ ಕಂಡುಹಿಡಿದು ಸುಲಭವಾಗಿ ಅದರ ಬಗ್ಗೆ ನಾಲ್ಕು ಮಾತುಗಳನ್ನು ಆಡಿ ಶಾಸನ ಸಭೆಯಲ್ಲಿ ಅದನ್ನು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಈ ಆಡಳಿತ ಸುಧಾರಣೆ ಬಗ್ಗೆ ನಿಮಗೆ ನಿಜವಾದ ಒಂದು ಆಲೋಚನೆ ಇದ್ದರೆ, ಕಳಕಳಿ ಇದ್ದರೆ, ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿ. ಹಿರಿಯ, ಅನುಭವಿ, ಸಮರ್ಥ ಆಡಳಿತಗಾರರನ್ನು ಈ ಸಮಿತಿಯ ಸದಸ್ಯರನ್ನಾಗಿ ಮಾಡಿ. ಏನೋ ಒಂದು ಜಂಟಿ ಸಲಹ ಸಮಿತಿ ಮಾಡಬೇಕು, ಒಂದು ನಾಲ್ಕು ಹೆಸರನ್ನು ಕಳುಹಿಸಬೇಕು ಎನ್ನುವ ವಿಚಾರವಲ್ಲ. ಆಡಳಿತದಲ್ಲಿ ಪ್ರಾಮಾಣಿಕವಾಗಿ ದುಡಿದಿರುವಂಥ ಅನುಭವ ಇರತಕ್ಕಂಥ ಸದಸ್ಯರನ್ನು ಹಾಗೂ ಹಿರಿಯ ಅಧಿಕಾರಿಗಳು ಏನು ಇದ್ದರು, ಅವರು ಇವತ್ತು ರಿಟೈರ್ ಆಗಿ ಹೊರಗಡೆ ಇರಬಹುದು; ಅಂಥವರ ಸಲಹೆ ಪಡೆದು ಒಂದು ಸಮಗ್ರವಾದ ಮಸೂದೆಯನ್ನು ಶಾಸನ ಸಭೆಯಲ್ಲಿ ಇಟ್ಟು ಜನರಿಗೆ ವಿಶ್ವಾಸ ಬರುವಂಥ ರೀತಿಯಲ್ಲಿ ಕೆಲಸವನ್ನು ಮಾಡಬೇಕು. ಇಲ್ಲದಿದ್ದರೆ ಸುಮ್ಮನೆ ಮೀಟಿಂಗ್‌ಗಳು ಆಗುತ್ತದೆ. ಟಿಎ ಡಿಎ ತೆಗೆದುಕೊಳ್ಳುವ ಸ್ಥಿತಿಗೆ ನಾವು ಹೋಗುತ್ತೇವೆ. ಇದಕ್ಕೆ ಬದಲು ಇದರಲ್ಲಿ ಸಮಗ್ರವಾದ ಚಿಂತನೆಯ ಅಗತ್ಯ ಇದೆಯೆಂದು ಭಾವನೆ ಮಾಡಿ ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಒಂದು ಆಡಳಿತ ಸುಧಾರಣೆ ಬಗ್ಗೆ ಒಂದು ವಿಧೇಯಕವನ್ನು ಸರ್ಕಾರದವರು ಇಲ್ಲಿ ಮಂಡಿಸಿದ್ದಾರೆ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೂ ಕಳುಹಿಸತಕ್ಕಂಥ ವಿಚಾರ ಇಲ್ಲಿ ನಡೆದಿದೆ. ಆದರೆ, ಆಡಳಿತ ಸುಧಾರಣೆ ಬಗ್ಗೆ ಒಂದು ನಿರಂತರವಾದ ಚಿಂತನೆ ಈ ರಾಷ್ಟ್ರದಲ್ಲಿ ಮತ್ತು ಈ ರಾಜ್ಯದಲ್ಲಿ ನಡೆದಿದೆ. ನಮ್ಮ ವಿರೋಧಪಕ್ಷದ ನಾಯಕರು ತಿಳಿಸಿದ ರೀತಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಆಡಳಿತ ಸುಧಾರಣೆ ಬಗ್ಗೆ ಸಮಗ್ರವಾಗಿ ಚಿಂತಿಸಿ, ದೇಶದ ಉದ್ದಗಲಕ್ಕೂ ಪ್ರವಾಸ ಮಾಡಿ, ಯಾವ ರೀತಿಯ ಆಡಳಿತ ಇರಬೇಕೆಂದು, ಒಂದು ಪವಿತ್ರವಾದಂಥ ವರದಿಯನ್ನೇ ಕೊಟ್ಟಿದ್ದಾರೆ. ಅದನ್ನು 'ಗ್ರಂಥ' ಎಂದು ಬೇಕಾದರೆ ಹೇಳಬಹುದು. ಅದು ಮಹಾಭಾರತ ಮತ್ತು ಕುರಾನ್‌ನಷ್ಟೇ ಪವಿತ್ರವಾದಂಥಾದ್ದು ಎಂಬ ಮಾತನ್ನೂ ಸಹ ನಾನು ಈ ಸಂದರ್ಭದಲ್ಲಿ

ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಷ್ಟು ಪಾವಿತ್ರ್ಯತೆಯನ್ನು ಪಡೆದಂಥ ಆಡಳಿತ ಸುಧಾರಣಾ ಸಮಿತಿಯ ವರದಿ ನಮ್ಮ ಸರ್ಕಾರದ ಕೈಯಲ್ಲಿದೆ. ಬಹುಶ: ಇತ್ತೀಚೆಗೆ ಬರತಕ್ಕಂಥ ಸರ್ಕಾರಗಳು ಅಂದರೆ ಶ್ರೀಮಾನ್ ಕೆಂಗಲ್ ಹನುಮಂತ್ಯನರವರ ನಂತರ ಬಂದಂಥ ಸರ್ಕಾರಗಳು ಈ ವರದಿಯನ್ನು ನೋಡಿ, ವರದಿ ಬಗ್ಗೆ ಸ್ವಲ್ಪ ಅಂಶವನ್ನಾದರೂ ನಾವು ಅನುಷ್ಠಾನಕ್ಕೆ ತರಬೇಕು ಎನ್ನತಕ್ಕಂಥಾದ್ದು ಇವೊತ್ತು ನಮ್ಮಲ್ಲಿಲ್ಲ. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರಿಗೆ ರಾಷ್ಟ್ರದ ಬಗ್ಗೆ, ರಾಜ್ಯದ ಬಗ್ಗೆ, ಆಡಳಿತ ಯಾವ ದೃಷ್ಟಿಯಲ್ಲಿರಬೇಕು? ಎಂಬುದರ ಬಗ್ಗೆ ಬಹಳ ಚಿಂತನೆ ಇತ್ತು. ಮತ್ತು ಅವರಿಗೆ ನಿಜವಾಗಲೂ ಅಧಿಕಾರಶಾಹಿಗೆ ಹೆಚ್ಚಿನ ವಿರೋಧವಿತ್ತು. ಪ್ರಜಾಪ್ರಭುತ್ವಕ್ಕೆ ಬೆಂಬಲವನ್ನು ಸದಾ ನೀಡುತ್ತಿದ್ದರು. ಚುನಾಯಿತ ಪ್ರತಿನಿಧಿಗಳಿಗೆ ಬಹಳ ಹೆಚ್ಚಿನ ಜವಾಬ್ದಾರಿ ಇರಬೇಕೆಂದು ಹೇಳುತ್ತಿದ್ದರು. ಅಧಿಕಾರಿಗಳ ನೀತಿಗಳ ಬಗ್ಗೆ ಅವರಿಗೆ ಹೊಂದಾಣಿಕೆ ಇರಲಿಲ್ಲ. ಅವರು ಅನೇಕ ವಿಚಾರಗಳ ಬಗ್ಗೆ ಬರೆದಿದ್ದಾರೆ. ಮಂತ್ರಿಮಂಡಲವನ್ನು ರಚನೆ ಮಾಡುವಾಗ ಎಷ್ಟು ಜನ ಮಂತ್ರಿಗಳಿರಬೇಕು? ಎಷ್ಟು ಸಂಖ್ಯೆಯ ಶಾಸನಸಭೆಗೆ ಎಷ್ಟು ಜನ ಮಂತ್ರಿಗಳು ಇರಬೇಕು ಎಂಬ ವಿಚಾರವನ್ನು ಸಹ ಹೇಳಿದ್ದಾರೆ. ಈ ಪ್ರಶ್ನೆ ನೋಡಿದಾಗ ಇವೊತ್ತಿನ ದಿನಗಳಲ್ಲಿ ನಾವು ಮಂತ್ರಿಗಳ ಆಯ್ಕೆಯನ್ನು ನೋಡಿದಾಗ ಯಾವ ಸುಧಾರಣಾ ಸಮಿತಿಯ ವರದಿಯನ್ನೂ ಸಹ ನಾವು ಗಮನದಲ್ಲಿಟ್ಟುಕೊಂಡಿಲ್ಲ. ರಾಜ್ಯಕ್ಕೆ ಈಗ ಬಹಳಷ್ಟು ಮಂತ್ರಿಗಳನ್ನು ನೇಮಕ ಮಾಡುತ್ತಿದ್ದಾರೆ. ಹಿಂದೆ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಆಡಳಿತ ಸುಧಾರಣೆಯ ಬಗ್ಗೆ ಬರೆದಂಥ ವರದಿಯಲ್ಲಿ ಇದೆಲ್ಲಾ ನಮೂದಿಸಿದ್ದಾರೆಂದು ನಾನು ನಿಮಗೆ ಹೇಳುತ್ತಿದ್ದೇನೆ. ಹನುಮಂತಯ್ಯನವರ ಸುಧಾರಣಾ ಸಮಿತಿಯಲ್ಲಿ ಇದೆಲ್ಲಾ ಅಡಗಿದೆಯೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಂತ್ರಿಗಳನ್ನು ತೆಗೆದುಕೊಳ್ಳುವುದು, ಬಿಡುವುದು ಅದು ನಿಮಗೆ ಸೇರಿದ್ದುದು. ಈ ಎಲ್ಲವನ್ನೂ ಸಹ ತಮ್ಮ ಪುಸ್ತಕದಲ್ಲಿ ಸಂಪೂರ್ಣವಾಗಿ ಚಿಂತನೆ ಮಾಡಿದ್ದಾರೆ. ಬಹುಶ: ತಾವು ಅದನ್ನು ಅಭ್ಯಾಸ ಮಾಡಿದ್ದೀರೋ ಏನೋ ಎಂದು ನನಗೆ ಗೊತ್ತಿಲ್ಲ. ಬಹುಶ: ನೀವು ಅದನ್ನು ತೆಗೆದುಕೊಂಡು ಓದಿದರೆ ತಾವು ಬದಲಾವಣೆ ಆಗುತ್ತಿದ್ದೀರಿ ಎಂಬ ನಂಬಿಕೆ ನನಗಿದೆ. ಆದರೂ ಈ ಒಂದು ವಿಧೇಯಕವನ್ನು ತಾವು ಈ ರಾಜ್ಯದಲ್ಲಿ ಮತ್ತು ಈ ದೇಶದಲ್ಲೇ ಪ್ರಪ್ರಥಮವಾಗಿ ತರತಕ್ಕಂಥ ಒಂದು ಕೆಲಸವನ್ನು ತಾವು ಮಾಡಿದ್ದೀರಿ. ಆದರೆ, ಒಂದು ವಿಚಾರವನ್ನು ತಾವು ಗಮನದಲ್ಲಿಡಬೇಕು. ಏನೆಂದರೆ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡತಕ್ಕಂಥ ದಿಕ್ಕಿಗೆ ನಿಮ್ಮ ಆಲೋಚನೆಯಾಗಲಿ, ಚಿಂತನೆಯಾಗಲಿ ಹೋಗಬಾರದು. ಇದು ನನ್ನ ಪ್ರಾಮಾಣಿಕವಾದ ಒಂದು ಅನಿಸಿಕೆ. ನಾನು ಯಾವ ಒಬ್ಬ ಅಧಿಕಾರಿಯನ್ನು ಕುರಿತು ಮಾತನಾಡುತ್ತಿಲ್ಲ. ಈಗಾಗಲೇ ಅಧಿಕಾರಿಗಳಿಗೆ ಇರತಕ್ಕಂಥ ಅಧಿಕಾರ, ಜವಾಬ್ದಾರಿಗಳು ಬಹಳ ಇದೆ. ಈ ಅಧಿಕಾರಿವನ್ನು ಉಪಯೋಗಿಸಿಕೊಂಡು ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶಗಳು ಅಧಿಕಾರಿಗಳ ಮೇಲೆ, ಅವರಿಗೆ ಇರತಕ್ಕಂಥ ಮತ್ತು ಕೊಟ್ಟಿರತಕ್ಕಂಥದ್ದು ಈಗಿನ ಕಾನೂನಿನಡಿಯಲ್ಲಿದೆ. ಈಗ ನಮ್ಮಲ್ಲಿ ಸರ್ಕಾರಗಳು ಬದಲಾವಣೆಯಾಗುತ್ತಿರುತ್ತದೆ, ಸರ್ಕಾರಗಳು ಬದಲಾವಣೆಯಾದ ನಂತರ ಅಧಿಕಾರಿಗಳು ಬದಲಾವಣೆಯಾಗುತ್ತಿರುತ್ತಾರೆ. ಇದರಿಂದ ಆಡಳಿತ ಸುಧಾರಣೆಯಾಗುವುದಿಲ್ಲ. ಒಬ್ಬೊಬ್ಬರು ಮುಖ್ಯಮಂತ್ರಿಗಳು ಬಂದಾಗ ಒಂದೊಂದು ಗುಂಪಿನ ಅಧಿಕಾರಿಗಳು ಬದಲಾವಣೆಯಾಗುತ್ತಿರುತ್ತಾರೆ. ಪಾಪ! ಅವರು ಯಜ್ಞ ಪಶುಗಳಾಗುತ್ತಾರೆ. ಯಾವ ಅಧಿಕಾರಿ ಯಾರ ಜೊತೆಯಲ್ಲಿ ಎಲ್ಲಿರಬೇಕು ಎಂಬುದೊಂದು ದೊಡ್ಡ ಸಮಸ್ಯೆಯಾಗಿದೆ.

ಒಬ್ಬ ಮುಖ್ಯಮಂತ್ರಿಯಾದ ನಂತರ ಒಂದು ಗುಂಪಿರುತ್ತದೆ. ಈ ರೀತಿ ಆದರೆ ಈ ಅಧಿಕಾರಿಗಳಲ್ಲಿ ಗುಂಪುಗಾರಿಕೆಯನ್ನು ನಾವೇ ಪ್ರಚೋದನೆ ಮಾಡಿ, ರಾಜಕಾರಿಣಿಗಳಾದ ನಾವೇ ಪ್ರೋತ್ಸಾಹ ಕೊಡುವುದಾದರೆ ನನಗನ್ನಿಸುತ್ತದೆ; ಇದು ಆಡಳಿತ ಸುಧಾರಣೆಯಾಗುವುದಿಲ್ಲ.

4.30 ಪಿ.ಎಂ

ಆಡಳಿತ ಸಮಗ್ರವಾಗಿ ಬೆಳೆಯುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ತಮಗೆ ಹೇಳುತ್ತೇನೆ. ಆಡಳಿತದಲ್ಲಿ ಅಧಿಕಾರ ವರ್ಗದಲ್ಲಿ ಬಹಳ ಏರುಪೇರುಗಳಾಗಿವೆ. ಉದಾಹರಣೆಗೆ ಹೇಳುವುದಾದರೆ ಎಲ್ಲಾ ಅಧಿಕಾರಿಗಳಿಗಿರುವ ಸವಲತ್ತುಗಳು, ಎಲ್ಲಾ ಇಲಾಖೆಗಳಿಗಿರುವ ಸೌಲಭ್ಯಗಳು ಪೋಲೀಸ್ ಇಲಾಖೆಗೆ ಇಲ್ಲ. ಬೇರೆ ಇಲಾಖೆಯ ಅಧಿಕಾರಿಗಳು ದಿನಕ್ಕೆ ಎಷ್ಟು ಗಂಟೆಗಳ ಕಾಲ ಕೆಲಸ ಮಾಡುತ್ತಾರೆ? 8 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಆದರೆ ಪೋಲೀಸ್ ಇಲಾಖೆಯಲ್ಲಿರುವ ಪೋಲೀಸ್ ಪೇದೆಯಿಂದ ಹಿಡಿದು ಮುಖ್ಯಪೇದೆ, ಮತ್ತು ಸಹಾಯಕ ಸಬ್‌ಇನ್ಸ್‌ಪೆಕ್ಟರ್‌ವರೆಗೆ ಚಿಂತನೆ ಮಾಡಿದಾಗ ಅವರು ಬೇರೆ ವರ್ಗದವರಾಗಿದ್ದಾರೆ. ಬೇರೆ ಇಲಾಖೆಯಲ್ಲಿರತಕ್ಕ ಅನೇಕ ಅನುಕೂಲಗಳು ಮತ್ತು ಸೌಲಭ್ಯಗಳಿಂದ ಇವರುಗಳು ವಂಚಿತರಾಗಿದ್ದಾರೆಂದು ನನಗನ್ನಿಸುತ್ತದೆ. ಇವರ ಬಗ್ಗೆ ನಾವು ಈವತ್ತು ಚಿಂತನೆ ಮಾಡಬೇಕು. ಇಲಾಖೆಯಿಂದ ಇಲಾಖೆಗೆ ತಾರತಮ್ಯವನ್ನು ತರತಕ್ಕ ಈ ಆಡಳಿತ ವ್ಯವಸ್ಥೆ ಇರುವುದಾದರೆ, ಆಡಳಿತವು ಚೆನ್ನಾಗಿ ನಡೆಯುತ್ತದೆಂದು ನಾವು ಅಂದುಕೊಳ್ಳಲು ಸಾಧ್ಯವಿಲ್ಲ. ಪೋಲೀಸ್‌ನವರಲ್ಲಿ ಕೆಲಸ ಮಾಡಲು ಒಂದು ನಿಗದಿತವಾದ ಸಮಯವಿಲ್ಲ. ಇಂತಹ ಸಮಯದಲ್ಲಿಯೇ ಕೆಲಸ ಮಾಡಬೇಕು ಎನ್ನುವ ಹಾಗಿಲ್ಲ. ಅಂದರೆ ದಿನದ 24 ಗಂಟೆಗಳ ಕಾಲವು ದುಡಿಯಬೇಕು. ಈ 24 ಗಂಟೆಗಳ ಕಾಲದ ದುಡಿತಕ್ಕೆ ಅವರಿಗೆ ನಾವು ಏನು ಕೊಡುತ್ತಿದ್ದೇವೆ? ಸಂಬಳವನ್ನು ಕೊಡುತ್ತಿದ್ದೇವೇಯೇ? ಅದೂ ಇಲ್ಲ. ಅವರಿಗೆ ಏನೇನು ಅನುಕೂಲತೆಗಳಿಲ್ಲ. ಬೇರೆ ನೌಕರರಿಗೂ ಪೋಲೀಸ್ ನೌಕರರಿಗೂ ಇರತಕ್ಕ ವ್ಯತ್ಯಾಸ ಬಹಳವಾಗಿದೆ.

ಅನೇಕ ಬಾರಿ ಪೋಲೀಸ್‌ನವರು ನನಗೆ ಸಿಕ್ಕಿದಾಗಲೆಲ್ಲ, ಪೋಲೀಸ್‌ನ ಕೆಳವರ್ಗದ ನೌಕರರು ಏನು ಹೇಳುತ್ತಾರೆಂದರೆ, ಒಂದು ಚಳುವಳಿಯಾಗಲಿ, ಒಂದು ಸತ್ಯಾಗ್ರಹವಾಗಲಿ ಬಂದ್ ಎಂದು ಆದಾಗ, ಅವರುಗಳು ಬೆಳಿಗ್ಗೆಯಿಂದ ಸಂಜೆಯವರೆಗೂ ನಿಲ್ಲಬೇಕಾಗುತ್ತದೆಂದು ಹೇಳುತ್ತಾರೆ. ಎಷ್ಟೋ ಕಡೆ ರಾತ್ರಿ ಮನೆಗೆ ಹೋಗುವುದು 12 ಗಂಟೆಗೆ, ಮತ್ತೆ ಬೆಳಿಗ್ಗೆ ಎದ್ದು ಬರತಕ್ಕದ್ದು 5 ಗಂಟೆಗೆ; ತಮ್ಮ ಮಕ್ಕಳಿಗೆ ತಮ್ಮ ತಂದೆಯಾರು ಎನ್ನತಕ್ಕ ಒಂದು ಚಿಂತನೆ ಬಂದಿರತಕ್ಕ ಪರಿಸ್ಥಿತಿ ಲಕ್ಷಾಂತರ ಜನ ಪೋಲೀಸ್ ಕಾನ್ಸ್‌ಟೇಬಲ್, ಹೆಡ್ ಕಾನ್ಸ್‌ಟೇಬಲ್ ಮತ್ತು ಸಹಾಯಕ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮೇಲೆ ಇದೆ. ನಾನು ತಮಗೆ ಹೇಳುತ್ತಿದ್ದೇನೆ. ತಾವು ಆಡಳಿತವನ್ನು ಸುಧಾರಣೆ ಮಾಡುವುದಾದರೆ, ಈ ಸುಧಾರಣೆಯಲ್ಲಿ ತಾರತಮ್ಯವಿರಬಾರದು. ಇಲಾಖೆಯಿಂದ ಇಲಾಖೆಗೆ ತಾರಾತಮ್ಯವಿರತಕ್ಕದ್ದನ್ನು ನಾನು ಒಪ್ಪುವುದಿಲ್ಲ. ಈ ತಾರಾತಮ್ಯವನ್ನು ಮೊದಲು ಸರಿಪಡಿಸಬೇಕು. ಈಗ ಬೇರೆ ಎಲ್ಲಾ ಇಲಾಖೆಯವರು ಹೆಚ್ಚಿನ ಸಂಬಳ ಕೇಳುವುದಕ್ಕೆ, ಭತ್ಯವನ್ನು ಕೇಳುವುದಕ್ಕೆ, ಚಳುವಳಿಯನ್ನು ಮಾಡಬಹುದು; ಸತ್ಯಾಗ್ರಹವನ್ನು ಮಾಡಬಹುದು, ಮೆರವಣಿಗೆಯನ್ನು ಮಾಡಬಹುದು; ಆದರೆ ಪೋಲೀಸ್ ಇಲಾಖೆಯವರು ಇವುಗಳನ್ನು ಮಾಡುವುದಕ್ಕೆ ತಡೆ ಹಾಕಿದ್ದೀರಿ. ಅವರ ಕತ್ತನ್ನು ಹಿಡಿದಿದ್ದೀರಿ; ಅವರ ಉಸಿರನ್ನು ಹಿಡಿದಿದ್ದೀರಿ; ಇದರಿಂದ ಅವರ ಧ್ವನಿಯನ್ನು ಎತ್ತಲು ಆಗುವುದಿಲ್ಲ, ಅವರು

ಬೀದಿಗೆ ಬರಬಾರದು. ಸತ್ಯಾಗ್ರಹ ಮಾಡಬಾರದು. ಮೆರವಣಿಗೆ ಮಾಡಬಾರದು. ಮತ್ತೆ ಇವರುಗಳು ಯಾತ ಮುಂದೆ ಪ್ರಶ್ನೆ ಮಾಡಬೇಕು. ನಿಜವಾಗಿ ಹೇಳುತ್ತಿದ್ದೇನೆ; ಅವರಿಗೆ ಸತ್ಯಾಗ್ರಹ ಕಾಲದಲ್ಲಿ, ಬಂದ್ ಆದಾಗ, ಕೊಡುವ ಭತ್ಯ ಎಷ್ಟು? ಯಾವುದೋ ಓಬೀರಾಯನ ಕಾಲದ ಎರಡು ರೂಪಾಯಿಗಳನ್ನು ಕೊಡುತ್ತೀರಿ; ಅವರಿಗೆ ಕೊಟ್ಟಿರತಕ್ಕ ಮನೆಗಳನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ನೋಡಬೇಕು. ಅವರಿಗೆ ಕೊಟ್ಟಿರತಕ್ಕ ಮನೆಗಳು ಬಹಳಷ್ಟು ಹಳೆಯ ಕಾಲದ್ದು. ಬಹುಶ: ಅವುಗಳಿಗೆ ಸುಣ್ಣವನ್ನು ಬಳಿದು ಹಲವಾರು ವರ್ಷಗಳಾಗಿದೆ. ಅವರಿಗೆ ಕೊಡತಕ್ಕ ಬಟ್ಟೆಯನ್ನು ಎಷ್ಟು ದಿನಕ್ಕೆ ಒಂದು ಸಲ ಬಟ್ಟೆಯನ್ನು ಕೊಡುತ್ತೀರಿ? ಅವರಿಗೆ ಬೂಟ್ಸ್‌ನ್ನು ಎರಡು ವರ್ಷಕ್ಕೆ ಒಂದು ಸಾರಿ ಕೊಡುತ್ತೀರೆಂದು ಕಾಣುತ್ತದೆ; ವರ್ಷಕ್ಕೊಂದು ಸಾರಿ ಅವರಿಗೆ ಬಟ್ಟೆಯನ್ನು ಕೊಡುತ್ತೀರಿ. ಇದನ್ನು ಚಿಂತನೆ ಮಾಡಿದರೆ, ಬಹುಶ: ಪೋಲೀಸ್ ಇಲಾಖೆಯಲ್ಲಿರತಕ್ಕ ಈ ಸಹಾಯಕ ಸಬ್ ಇನ್ಸ್‌ಪೆಕ್ಟರ್‌ಗಿಂತ ಕೆಳಗಿರುವ ವರ್ಗದ ಜನರ ಜೀವನ ನರಕಕ್ಕಿಂತ, ಭಿಕ್ಷೆ ಮಾಡುವವರಿಗಿಂತ ಕೆಳಗಡೆ ಇದ್ದಾರೆ. ಈ ಬಗ್ಗೆ, ನಿಮ್ಮ ಆಡಳಿತ ಸುಧಾರಣೆ ಮಾಡುವಾಗ ಬರೀ ಒಂದು ವರ್ಗದ ಯಾವುದೋ ಇಲಾಖೆಯ ಬೆಳವಣಿಗೆ ಮಾಡುವುದಿಲ್ಲ. ಈವತ್ತು ಎಲ್ಲಾ ಸಮಗ್ರವಗಿ ಎಲ್ಲಾ ಇಲಾಖೆಗಳ ಬಗ್ಗೆ ಅತಿ ಮುಖ್ಯವಾಗಿ ಈ ಪೋಲೀಸ್ ಇಲಾಖೆಯನ್ನು ಒಂದು ರೀತಿ ಕಟ್ಟಕಡೆಯ, ಕೆಲಸಕ್ಕೆ ಬಾರದಂತಹ ಇಲಾಖೆ ಎಂದು ಪರಿಗಣಿಸಬಾರದು. ಅವರಿಗೆ ರಕ್ಷಣೆ ಮಾತ್ರವಲ್ಲ ಎಲ್ಲಾ ಅನುಕೂಲಗಳು ಅವರಿಂದ ಬೇಕು. ಅವರಿಂದ ಎಲ್ಲಾ ಸಹಕಾರ ಬೇಕು. ಆದರೆ ಅವರನ್ನು ಗಮನಿಸತಕ್ಕ ಚಿಂತನೆ ತಮ್ಮಲ್ಲಿ ಇಲ್ಲ. ಎಷ್ಟು ಜನ ಪೋಲೀಸ್‌ನವರ ಮಕ್ಕಳಿಗೆ ವ್ಯಾಸಂಗಕ್ಕೆ ಆಗತಕ್ಕ ಅನುಕೂಲಗಳನ್ನು ಸರ್ಕಾರ ಕೊಟ್ಟಿದೆ. ಅದನ್ನು ಮಾಡಿಕೊಟ್ಟಿಲ್ಲ. ತಮಗೆ ನಾನು ಹೇಳುವುದೇನೆಂದರೆ ನಾನು ರೈಲ್ವೆ ಸತ್ಯಾಗ್ರಹಕ್ಕೆ ಹೋದಾಗ ನೋಡಿದ್ದೇನೆ, ಆ ಪೋಲೀಸ್ ಸ್ಟೇಷನ್‌ಗಳು ಯಾವ ರೀತಿ ಇದೆ ಎಂದರೆ, ಬಹುಶ: ನಾಯಿಗಳು ಸಹ ಅಲ್ಲಿ ಇರುವುದಕ್ಕಾಗುವುದಿಲ್ಲ. ಅದಕ್ಕಿಂತಲೂ ಕೆಟ್ಟದ್ದಾಗಿರತಕ್ಕ ಪೋಲೀಸ್ ಸ್ಟೇಶನ್ ಗಳಿವೆ. ತಾವು ಇದನ್ನು ನೋಡಬೇಕು. ಕೆಲವು ಕಡೆ ಪೋಲೀಸ್‌ನವರಿಗೆ ಅಲ್ಲಿ ಇಟ್ಟಿರುವಂತಹ ಬಿಂದಿಗೆ, ಕಸ ಪರಕೆ, ಅಲ್ಲರುವಂತಹ ವ್ಯವಸ್ಥೆ ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಈ ಪರಿಸ್ಥಿತಿಗೆ ನಾವು ಇಂದು ಅವರನ್ನು ಇಳಿಸಿದ್ದೇವೆ. ಕೆಲವರಿಗೆ ಬೂಡ್ಸ್ ಇಲ್ಲದೆ ಹರಿದಿರುವಂತಹ ಬೂಡ್ಸ್‌ಗಳನ್ನು ಹಾಕಿಕೊಂಡಿದ್ದಾರೆ. ಅವರು ಉತ್ತಮವಾಗಿರುವಂತಹ ಗಂಜಿ ಬಟ್ಟೆಯನ್ನು ಹಾಕಿಕೊಳ್ಳಬೇಕು. ಅವರಿಗೆ ನೀವು ಎಷ್ಟು ಸಂಬಳ ಕೊಡುತ್ತಿದ್ದೀರಿ, ಬೇರೆ ಇಲಾಖೆಯ ನೌಕರರಿಗೆ ಒಂದು ದಿನಕ್ಕೆ ಎಂಟು ಗಂಟೆ ಕೆಲಸಮಾಡಬೇಕೆಂದು ಕಾಲವನ್ನು ನಿಗದಿ ಮಾಡಿರುವಂತೆ ಈ ಪೋಲೀಸ್‌ನವರಿಗೂ ಒಂದು ಕಾಲವನ್ನು ನಿಗದಿ ಮಾಡಬೇಕು. ಇದನ್ನು ನಾವೇನು ಪ್ರಚೋದನೆ ಮಾಡುತ್ತಿಲ್ಲ, ಅವರಿಗೆ ಈ ಸೌಲಭ್ಯಗಳನ್ನು ಒದಗಿಸದಿದ್ದರೂ ಸಹ ಅವರ ಮಾತನ್ನು ಆದರೂ ಕೇಳುವಂತಹ ಸೌಜನ್ಯ ಸಹ ಸರ್ಕಾರಕ್ಕೆ ಇಲ್ಲ, ಅವರು ಸಂಘವನ್ನು ಕಟ್ಟಿಕೊಂಡು ಸಂಘಟನೆಯಿಂದ ಹೋರಾಡುವಂತಹ ಅವಕಾಶವೂ ಇಲ್ಲ, ಅವರ ಗೋಳನ್ನು ಕೇಳದೇ ಇರುವಂತಹ ಪರಿಸ್ಥಿತಿ ಇರುವಾಗ ಅವರ ಗೋಳನ್ನು ಯಾರು ಕೇಳಬೇಕು. ಆಡಳಿತದಲ್ಲಿ ಸುಧಾರಣೆಯಾಗಬೇಕೆಂದರೆ ಪೋಲೀಸ್ ವರ್ಗದ ಜನತೆಯನ್ನು ನೀವು ಗಮನದಲ್ಲಿಟ್ಟುಕೊಂಡು ಅವರಿಗೆ ಅನೇಕ ಸವಲತ್ತುಗಳನ್ನು ಒದಗಿಸಬೇಕಾಗಿದೆ. ಆ ಸಲವತ್ತುಗಳನ್ನು ಒದಗಿಸುವ ಬಗ್ಗೆ ತಾವು

ಒಂದು ಸದನ ಸಮಿತಿಯನ್ನು ಮಾಡಿ. ನಮ್ಮ ಕರ್ನಾಟಕದ ಪೋಲೀಸ್ ಇಲಾಖೆಯಲ್ಲಿ ಇರುವಂತಹ ಕೆಳವರ್ಗದ ನೌಕರರಿಗೆ ಯಾವ ರೀತಿಯ ಅನುಕೂಲಗಳನ್ನು ಮಾಡಬೇಕು? ಅವರ ಸಮಸ್ಯೆಯೇನು? ಅದಕ್ಕೆ ಪರಿಹಾರ ಏನು? ಅದರ ಬಗ್ಗೆ ತಮ್ಮ ಚಿಂತನೆ ಏನು ಎನ್ನುವ ಬಗ್ಗೆ ತಾವು ಒಂದು ಸದನ ಸಮಿತಿಯನ್ನು ಮಾಡಬೇಕು. ಇದರ ಬಗ್ಗೆ ಧರ್ಮವೀರರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಎರಡು ಭಾಗಗಳಿವೆ. ಒಂದು ಆಡಳಿತದ ಬಗ್ಗೆ ವರದಿ ಕೊಟ್ಟಿದ್ದಾರೆ. ಮತ್ತೊಂದು ಪೋಲೀಸ್ ಇಲಾಖೆಯು ಯಾವ ರೀತಿ ಇರಬೇಕು? ಕಾನ್ಸ್‌ಟೇಬಲ್‌ಗಳು ಎಷ್ಟು ಇರಬೇಕು? ದೆಫದಾರರು ಎಷ್ಟು ಇರಬೇಕು ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್‌ಗಳು ಎಷ್ಟು ಇರಬೇಕು. ಇವೆಲ್ಲವನ್ನೂ ಸೇರಿಸಿ ಒಂದು ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ನಿಮ್ಮ ಕಾಲದಲ್ಲಾದರೂ ಅವರಿಗೆ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುವಂತಹ ಒಂದು ವ್ಯವಸ್ಥೆ ಬಗ್ಗೆ ತಾವು ಚಿಂತನೆ ಮಾಡಬೇಕೆಂದು ನಾನು ಹೇಳುತ್ತೇನೆ. 1969-70ರಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯಮಂತ್ರಿ ಹಾಗೂ ಗೃಹಮಂತ್ರಿಯಾಗಿದ್ದಾಗ ನಮ್ಮ ಕರ್ನಾಟಕದ ಪೋಲೀಸ್‌ನವರಿಗೆ ಸ್ವಲ್ಪ ಸುಧಾರಣೆ ಮಾಡಿದರು. ಹಿಂದೆ ಪೋಲೀಸ್‌ನವರಿಗೆ ಬರೀ ಚಡ್ಡಿ ಇತ್ತು. ಇಡೀ ಅರ್ಧ ಶರೀರವೇ ಕಾಣುತ್ತಿತ್ತು. ಆಗ ನಾವೆಲ್ಲಾ ಸೇರಿ ಅವರಿಗೆ ಪ್ಯಾಂಟ್, ಬೂಡ್ಸ್ ಮತ್ತು ಹ್ಯಾಟ್ ಕೊಡಬೇಕೆಂದು ಈ ಕಡೆಯಿಂದ ನಾವುಗಳು ಒಕ್ಕೊರಲಿನಿಂದ ಹೇಳಿದಾಗ ಅದನ್ನು ಜಾರಿಗೆ ತಂದರು. ಅದಕ್ಕೂ ಮೊದಲು ಒಂದು ರೀತಿಯಾಗಿ ಕಾಲಿನಲ್ಲಿ ಟೇಪ್ ಸುತ್ತಿದ ಹಾಗೆ ಬಟ್ಟೆಟೇಪನ್ನು ಸುತ್ತಿ ಅಲ್ಲಿಗೆ ಒಂದು ಪೆನ್ಸಿಲ್ ಸಿಕ್ಕಿಸಿಕೊಂಡು ಬಹಳ ಹೀನಾಯವಾದಂತಹ ಕೆಲಸದಲ್ಲಿ ಇರಬೇಕಾದಂತಹ ಪರಿಸ್ಥಿತಿ ಇತ್ತು. ಸದ್ಯ ಇವತ್ತು ಒಂದು ಟೋಪಿ ಮತ್ತು ಪ್ಯಾಂಟ್‌ನ್ನು ಹಾಕಿಕೊಂಡಿದ್ದಾರೆ.ಈ ಪೋಲೀಸ್‌ನವರ ಪರಿಸ್ಥಿತಿಯನ್ನು ಸುಧಾರಿಸಬೇಕೆಂದು ಹಿಂದೆ ನಾವು ನೀವು ಎಲ್ಲಾ ಇಲ್ಲಿ ಕುಳಿತು ಮಾತನಾಡಿದ್ದೇವೆ. ಇಂಗ್ಲೀಷ್‌ನವರ ಆಡಳಿತ ಮುಗಿದು ಪ್ರಜಾಪ್ರಭುತ್ವ ಬಂದಮೇಲೂ ಸಹ ಅವರು ಸಂತೆಗಳಲ್ಲಿ ಕಂಕಳಲ್ಲಿ ಒಂದು ಪುಸ್ತಕ ಪೆನ್ಸಿಲ್ ಇಟ್ಟುಕೊಂಡು ಹೋಗುತ್ತಿದ್ದರು. ಅದನ್ನು ನಾವು ನೋಡಿದ್ದೇವೆ. ಇದಕ್ಕೆ ಯಾವುದೇ ಒಂದು ಪಕ್ಷ ಪಂಗಡ ಭೇದ ಭಾವನೆ ಇಲ್ಲದೆ ಈ ವರ್ಗದ ನೌಕರರಿಗೆ ಅನುಕೂಲ ಮಾಡಿಕೊಡಬೇಕು.

ಡಾ. ಎಸ್.ಬಿ. ನಂಜಪ್ಪ : ಅಧ್ಯಕ್ಷರೆ, ಈ ಹಿಂದೆ ಪೋಲೀಸ್‌ನವರು ಟೇಪನ್ನು ಏಕೆ ಸುತ್ತುತ್ತಿದ್ದರೆಂದರೆ ಅವರು ಈ ಇಲಾಖೆಯಲ್ಲಿ ಬಹಳಷ್ಟು ಕಾಲ ಅಂದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ನಿಂತುಕೊಳ್ಳಬೇಕಾದ ವ್ಯವಸ್ಥೆ ಇರುತ್ತದೆ. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಿಂತರೆ Varicose veins - ಅಂದರೆ ಕಾಲಲ್ಲಿ ನರಗಳು ಸುಲಿದುಕೊಳ್ಳುವುದು ಎನು ಬರುತ್ತದೆ, ಆ Varicose veins ಬರದೇ ಇರಲಿ ಎಂದು ಆ ಟೇಪನ್ನು ಮಾಡಿದ್ದರು. ಈಗಲೂ ಕೂಡ ಆ ಟೇಪನ್ನು ಕಾಲಲ್ಲಿ ಸುತ್ತಿಕೊಂಡು ಅದರ ಮೇಲೆ ಪ್ಯಾಂಟ್‌ನ್ನು ಹಾಕಿಕೊಳ್ಳುತ್ತಾರೆ. Most of the Police Department people Tram & Train drivers they will get varicose veins. ಅವರು ನಿಂತುಕೊಂಡು ಕೆಲಸ ಮಾಡುತ್ತಾರೆಂದು ಅದನ್ನು ಜಾರಿ ಮಾಡಿದ್ದರು. ಅದು ಕೆಟ್ಟದ್ದಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇರಲಿ ಒಳ್ಳೆಯದು; ನಾನು ಅದನ್ನು ಕೆಟ್ಟದ್ದು ಎಂದು ಹೇಳುತ್ತಿಲ್ಲ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ

ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ತಾವು ಈ ಬಗ್ಗೆ ಒಂದು ಸದನದ ಸಮಿತಿ ಮಾಡಿದರೂ ಸಂತೋಷ; ಇಲ್ಲವೆಂದರೆ ಈ ವರ್ಗದ ಬಗ್ಗೆ ಚಿಂತನೆ ಮಾಡುವಂತಹ ಒಬ್ಬ ದಕ್ಷ ಅಧಿಕಾರಿಯನ್ನು ಒಳಗೊಂಡು ಒಂದು ಸಮಿತಿ ಮಾಡಿ. ಅಧಿಕಾರಿಗಳಿಂದ ಒಂದು ವರದಿ ತರಿಸಿ; ಈ ಪೋಲೀಸ್‌ನವರಿಗೆ ಏನೇನು ಅನುಕೂಲ ಒದಗಿಸಬೇಕೆಂದು ತಾವು ನಿಜವಾಗಿಯೂ, ಪ್ರಾಮಾಣಿಕವಾದಂತಹ ಒಂದು ಚಿಂತನೆ ಮಾಡಬೇಕು. ಏಕೆಂದರೆ ಈಗಾಗಲೇ ನಮ್ಮ ಧರ್ಮವೀರರ ಒಂದು ವರದಿ ಬಂದಿದೆ. ಆ ವರದಿ ಪ್ರಕಾರ ತಾವು ಏನು ಕ್ರಮವನ್ನು ಕೈಗೊಂಡಿದ್ದೀರಿ? ಆ ವರದಿ ಬಹಳ ಚೆನ್ನಾಗಿದೆ. ನಾನು ಆ ವರದಿಯನ್ನು ಓದಿದ್ದೇನೆ. ಇದರಲ್ಲಿ ಎಷ್ಟು ಜನ ಪೋಲೀಸ್ ಇರಬೇಕು? ಹೇಗೆ ಇರಬೇಕು ಅನ್ನುವಂತಹದ್ದು ಇದೆ. ಕೆಲವು ಕಡೆ ಪೋಲೀಸ್‌ನವರ ಮಿತಿ ಮೀರಿದ ವರ್ತನೆ ನಡೆದಿರುವುದು ಉಂಟು. ಆದರೂ ಸಹ ಅವರ ಪರಿಸ್ಥಿತಿಯನ್ನು ನಾವು ನೋಡಬೇಕು. ಅನೇಕಕಡೆ ಪೋಲೀಸ್‌ನವರು ಕೆಳಗೆ ಬಿದ್ದರೆ ಅವರನ್ನು ಕೇಳುವವರೇ ಗತಿ ಇಲ್ಲ; ಅವರ ಹೆಣಗಳಿಗೆ ರಾಜ್ಯದಲ್ಲಿ ಬೆಲೆ ಇಲ್ಲ. ಇಂತಹ ಪರಿಸ್ಥಿತಿ ಇಂದು ಅವರಿಗೆ ಉದ್ಭವವಾಗಿದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು, ಇದಕ್ಕೆ ಸರ್ಕಾರದಿಂದ ಹಣ ಖರ್ಚಾಗುತ್ತದೆ ಎಂಬ ಚಿಂತನೆಯನ್ನು ಮಾಡಬಾರದು. ಸಬ್ ಇನ್ಸ್‌ಪೆಕ್ಟರ್‌ರವರು ಮತ್ತು ಅವರ ಮೇಲಿನ ವರ್ಗದವರು ಚೆನ್ನಾಗಿದ್ದಾರೆ. ಆದರೆ ಈ ಸಬ್‌ಇನ್ಸ್‌ಪೆಕ್ಟರೆಗಿಂತ ಕೆಳಗಿರುವ ಮೂರು ವರ್ಗದವರು ಯಾರು ಇದ್ದಾರೆ, ಅವರು ಕೆಲವು ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಇದನ್ನು ತಾವು ಸರಿಪಡಿಸಬೇಕು. ಮತ್ತು ಅವರು ಕಡ್ಡಾಯವಾಗಿ ದಿನದ 24 ಗಂಟೆ ದುಡಿಯಬೇಕು ಯಾವಾಗೆಂದರೆ ಆಗ ಕೆಲಸಕ್ಕೆ ಬರಬೇಕು ಎಂದು ನಿಯಮ ಇರುವುದನ್ನು ತೆಗೆಯಬೇಕು. ಅವರು ತಮ್ಮ ಒಂದು ಕರುಳಿನ ನೋವನ್ನು, ಹೃದಯದ ವೇದನೆಯನ್ನು ತಮಗೆ ನಾಳೆ ಏನಾದರೂ ತೊಂದರೆ ಕೊಡುತ್ತಾರೆಂದು ಮುಚ್ಚಿಕೊಂಡಿದ್ದಾರೆ. ಯಾವತ್ತಾದರೂ ಒಂದು ದಿವಸ ಆ ಜ್ವಾಲೆ ಹೊರಗಡೆ ಬಂದರೆ ಅವರು ನಿಜವಾಗಿಯೂ ಬೀದಿಗೆ ಬರುತ್ತಾರೆ ರಸ್ತೆಗೆ ಇಳಿಯುತ್ತಾರೆ. ಆಗ ನಾವು ಯಾರೂ ಏನೂ ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ, ತಮಗೆ ನಾನು ಏನು ಹೇಳುತ್ತಿದ್ದೇನೆಂದರೆ, ದಯಮಾಡಿ ಅವರ ಪರಿಸ್ಥಿತಿಯನ್ನು ನಿಮ್ಮ ಒಂದು ಸುಧಾರಣೆ ಮಾಡತಕ್ಕಂಥ ದೃಷ್ಟಿಯಲ್ಲಿ ತಾವು ಹೋದರೆ ನಿಮ್ಮ ಸರ್ಕಾರಕ್ಕೆ ಅವರೂ ಕೂಡ ಆಭಾರಿಯಾಗುತ್ತಾರೆ. ನಮ್ಮನ್ನು ಎಲ್ಲರೂ ಸಹ ಕೈ ಬಿಟ್ಟಿದ್ದರೂ ಈ ಸರ್ಕಾರದವರು ನಮ್ಮನ್ನು ಗಮನಿಸಿದ್ದಾರೆ ಎನ್ನತಕ್ಕಂಥ ಚಿಂತನೆಯನ್ನು ಕೂಡ ಅವರು ಮಾಡುತ್ತಾರೆ. ಆ ವರ್ಗದವರಿಗೆ ಅನುಕೂಲ ಮಾಡಬೇಕು ಮತ್ತು ಬೇರೆ ನೌಕರರಿಗೆ ಇರತಕ್ಕಂಥ ಎಲ್ಲ ಸವಲತ್ತುಗಳನ್ನು ಕೊಡಬೇಕು ಮತ್ತು ಅವರಿಗೆ ೮ ಗಂಟೆ ಮಾತ್ರ ನಿಮ್ಮ ಬೇರೆ ನೌಕರರಿಗೆ ಇರತಕ್ಕಂಥ, ಅವಕಾಶ ಅವರಿಗೂ ಕೊಡಬೇಕು ಎನ್ನತಕ್ಕಂಥ ಮಾತನ್ನು ತಮಗೆ ಹೇಳುತ್ತೇನೆ. ಒಂದೊಂದು ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ಬೆಳಿಗ್ಗೆ 5 ಗಂಟೆಗೆ ಬಂದರೆ ರಾತ್ರಿ ಕೂಡ ತಾನು ಮನೆಯಲ್ಲಿ ತನ್ನ ಹೆಂಗಸಿನ ಪಕ್ಕದಲ್ಲಿ ಮಲಗಿದ್ದರೂ ಕೂಡ ತಕ್ಷಣ ದೂರವಾಣಿ ಕರೆ ಬಂದರೆ ಎದ್ದು ಬರಬೇಕು ಹೊರಗಡೆ ಪರಿಸ್ಥಿತಿ ಆ ರೀತಿ ಇದೆ. ಅವನ ಜವಾಬ್ಧಾರಿ ಅಂದರೆ ಅದು ತಾಲ್ಲೂಕಿನಲ್ಲಾಗಲೀ, ಆ ಪ್ರದೇಶದಲ್ಲಿಯಾಗಲಿ, ಎಲ್ಲೇ ಆಗಲಿ, ಅಲ್ಲಿ ಅವನು ಇರುತ್ತಾನೋ ಅದೇ ಅವನಿಗೆ ಜವಾಬ್ದಾರಿ ಇರುತ್ತದೆ. ಏಕೆಂದರೆ ಪ್ರತಿಯೊಂದು ಅವನ ತಲೆಯಮೇಲೆ ಹಾಕುತ್ತೀರಿ. ಈ ಆಡಳಿತ ಸುಧಾರಣೆ ಎನ್ನತಕ್ಕಂತಾದ್ದು ಒಂದು ವರ್ಗದ ಒಂದೇ

ಇಲಾಖೆಯ, ಒಂದೇ ಕುಟುಂಬಕ್ಕೆ ಸುಧಾರಣೆ ಆಗಬಾರದು. ಪೋಲೀಸ್ ಇಲಾಖೆ ಸುಧಾರಣೆ ಸಮಗ್ರವಾಗಿ ಆಗಲೇಬೇಕು. ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ನಾನಂತೂ ಈ ಸದನದ ಒಳಗಡೆ ತಮ್ಮನ್ನು ಒತ್ತಾಯ ಮಾಡುತ್ತೇನೆ, ಹೊರಗಡೆ ಕೂಡ ಒತ್ತಾಯ ಮಾಡುತ್ತೇನೆ. ಇದರಲ್ಲಿ ಎರಡು ಅಭಿಪ್ರಾಯಗಳು ಇಲ್ಲ. ಆದ್ದರಿಂದ, ದಯಮಾಡಿ ಧ್ವನಿ ಇಲ್ಲದ, ಕೂಗು ಇಲ್ಲದ, ಈ ಜನರಿಗೆ ನಿಮ್ಮ ಸಂಪೂರ್ಣವಾದಂಥ ಆಡಳಿತದಲ್ಲಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಎನ್ನತಕ್ಕಂಥ ಮಾತನ್ನು ಹೇಳಿ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ತಾವು ಕಳುಹಿಸಬೇಕೆಂದು ಅಧ್ಯಕ್ಷರ ಮೂಲಕ ಒತ್ತಾಯಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಕೋಳಿವಾಡ್ (ರಾಣೆಬೆನ್ನೂರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಈ ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಪ್ರೊಸೀಜರ್ ಬಿಲ್ ಏನು ಮಂಡಿಸಿದ್ದಾರೆ, ಇದನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತಾ ಕೆಲವೊಂದು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈಗಿನ ಸಂದರ್ಭದಲ್ಲಿ, ಈ ಅಡ್ಮಿನಿಸ್ಟ್ರೇಷನ್ ಬಗ್ಗೆ ಆಮೂಲಾಗ್ರವಾಗಿ ಬದಲಾವಣೆಗಳನ್ನು ಮಾಡತಕ್ಕಂಥ ಕಾಲ ಬಹಳ ಪಕ್ವವಾಗಿದ್ದು, ಆ ಪಕ್ವವಾದ ಕಾಲದಲ್ಲಿ ಈ ಒಂದು ಪ್ರೊಸೀಜರ್ ಅಮೆಂಡ್‌ಮೆಂಟ್ ಆಕ್ಟ್ ಏನು ತಂದಿದ್ದಾರೆ, ಇದು ಬಹಳ ಸ್ತುತ್ಯವಾದಂತಾದ್ದು, ಇದು ಐತಿಹಾಸಿಕ ಒಂದು ಮಸೂದೆ ಎಂದು ನಾನು ಈ ಸಂದರ್ಭದಲ್ಲಿ ಕರೆದರೆ ತಪ್ಪಾಗಲಿಕ್ಕಿಲ್ಲ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸರ್ಕಾರದ ಆಡಳಿತದ ಎಲ್ಲಾ ಹಂತಗಳಲ್ಲೂ ಸಹಿತ ಒಂದಲ್ಲ ಒಂದು ರೀತಿಯ ಅಡೆತಡೆಗಳು ಉಂಟಾಗಿ ಯೋಜನೆಗಳು ಕಾರ್ಯರೂಪಕ್ಕೆ ಬರುವಲ್ಲಿ ಬಹಳ ತೊಂದರೆದಾಯಕವಾದಂಥ ಪರಿಸ್ಥಿತಿ ಈ ಸರ್ಕಾರದ ಹಿಡಿತವನ್ನು ಮೀರಿ ನಡೆಯತಕ್ಕಂಥ ಪರಿಸ್ಥಿತಿ ನಮ್ಮ ರಾಜ್ಯದಲ್ಲಿತ್ತು, ಅನೇಕ ರಾಜ್ಯಗಳಲ್ಲೂ ಇದೆ. ಉದಾಹರಣೆಗೆ ಹೇಳಬೇಕೆಂದರೆ ಸರ್ಕಾರ ಅನೇಕ ಯೋಜನೆಗಳನ್ನು ನಿರೂಪಣೆ ಮಾಡಿ ಬಡವನ ಬಾಗಿಲಿಗೆ ಆ ಯೋಜನೆಗಳನ್ನು ಮುಟ್ಟಿಸಬೇಕು ಎನ್ನತಕ್ಕಂಥ ಒಂದು ಸಹೃದಯದಿಂದ ಅನೇಕ ಯೋಜನೆಗಳನ್ನು ಮಾಡಿ ಕಾರ್ಯರೂಪಕ್ಕೆ ತರತಕ್ಕಂಥ ಕೆಲಸ ಏನಿದೆ, ಅದು ಈ ಅಧಿಕಾರಿಗಳ ಕೈಯಲ್ಲಿ ಹೋಗಲೇಬೇಕಾಗಿದೆ. ಸರ್ಕಾರದವರೇ, ಮಂತ್ರಿಗಳೇ ಇದನ್ನು ಬಡವನ ಬಾಗಿಲಿಗೆ ಮುಟ್ಟಿಸತಕ್ಕಂಥ ಕೆಲಸಮಾಡಲಿಕ್ಕೆ ಸಾಧ್ಯವಿಲ್ಲ. ಆಡಳಿತ ಮಾಡತಕ್ಕಂಥ ಸರ್ಕಾರ,ಈ ಅಧಿಕಾರಿಗಳ ಮುಖಾಂತರ ಇದನ್ನು ಕಾರ್ಯರೂಪಕ್ಕೆ ತರಬೇಕಾಗುತ್ತದೆ. ಅಧಿಕಾರಿಗಳದ್ದೇ ತಪ್ಪು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿಲ್ಲ. ಈ ಅಡ್ಮಿನಿಸ್ಟ್ರೇಟೀವ್ ಪ್ರೊನೀಜರ್ ಏನಿದೆ ಇದು ಅಧಿಕಾರಿಗಳದ್ದು ಇದು ಅನೇಕ ರೀತಿಯ ತೊಂದರೆಗಳನ್ನು ಕೊಡತಕ್ಕಂಥ ಪ್ರೊಸೀಜರ್ ಇತ್ತು. ಈಗ ಅದನ್ನು ಸಡಿಲಗೊಳಿಸಿ ಈ ಒಂದು ಆಕ್ಟನ್ನು ಏನು ತಂದಿದ್ದಾರೆ, ಇದು ಬಹಳ ಸ್ವಾಗತಾರ್ಹವಾದಂತಾದ್ದು. ಇದರ ಉದ್ದೇಶವನ್ನು ನಾವು ನೋಡಿದರೆ ಎಷ್ಟು ಸ್ತುತ್ಯವಾಗಿದೆ ಎನ್ನತಕ್ಕಂಥಾದ್ದನ್ನು ನಾವು ಹೇಳಬಹುದು. ಇಲ್ಲಿ ಈ ಮಸೂದೆಯನ್ನು ಬಗ್ಗೆ ಇಡೀ ರಾಜ್ಯದಲ್ಲೆಲ್ಲಾ ಒಂದೇ ರೀತಿಯ ಒಂದು ಆಡತಾತ್ಮಕ ವ್ಯವಸ್ಥೆಯನ್ನು ತರಬೇಕು ಎನ್ನತಕ್ಕಂಥ ಉದ್ದೇಶ ಇದೆ. ರಾಜ್ಯದ ಅನೇಕ ಭಾಗಗಳಲ್ಲಿ ಅನೇಕ ರೀತಿಯ ಆಡಳಿತಾತ್ಮಕ ವ್ಯವಸ್ಥೆ ಇದ್ದು, ಒಂದೇ ರೀತಿಯ ವ್ಯವಸ್ಥೆಬಾರದೇ ಇದ್ದುದರಿಂದ ಅಧಿಕಾರಿಗಳುದ್ದು ಸಹಿತ ಕಾರ್ಯರೂಪಕ್ಕೆ ತರುವಲ್ಲಿ ಅನೇಕ ತೊಂದರೆಗಳು ಆಗುತ್ತಿತ್ತು. ಇನ್ನು ಈ ಅಧಿಕಾರಿಗಳಿಗೆ ಹಂತಹಂತವಾಗಿ ಅಧಿಕಾರವನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ಈ ಮಸೂದೆಯಲ್ಲಿದೆ. ಹಂತಹಂತವಾಗಿ ಅಧಿಕಾರವನ್ನು ಕೊಡದೇ ಹೋದರೆ,

ಕೇವಲ ಸೆಂಟ್ರಲೈಸ್ಡ್ ಪವರ್ಸ್‌ನ್ನು ನಾವು ಇಟ್ಟುಕೊಂಡಿದ್ದರೆ ಆ ಯೋಜನೆಗಳು ಕಾರ್ಯರೂಪಕ್ಕೆ ಬರುವಲ್ಲಿ ಬಹಳ ವಿಳಂಬವಾಗುತ್ತಿತ್ತು.

ಈ ಮಸೂದೆಯಲ್ಲಿ ಹಂತಹಂತವಾಗಿ ಆಯಾಯ ಘಟ್ಟಗ ಅಧಿಕಾರಿಗಳಿಗೆ ಅಧಿಕಾರವನ್ನು ಕೊಡತಕ್ಕ ಮತ್ತು ಅವರು ಜವಾಬ್ದಾರಿಯುತರನ್ನಾಗಿ ಮಾಡತಕ್ಕ ವ್ಯವಸ್ಥೆ ಈ ಮಸೂದೆಯಲ್ಲಿರುವುದರಿಂದ ಇದು ಬಹಳ ಸ್ವಾಗತಾರ್ಹ ಮಸೂದೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಮತ್ತು ಈ ಆರ್ಥಿಕ ವ್ಯವಸ್ಥೆ ಎಂದರೆ ಫೈನಾನ್ಷಿಯಲ್ ಡಿಸಿಪ್ಲಿನ್‌ನ್ನು ತರತಕ್ಕ ವ್ಯವಸ್ಥೆ ಕೂಡ ಈ ಮಸೂದೆಯಲ್ಲಿದೆ. ಯಾವ ಅಧಿಕಾರಿಯೂ ಕೂಡ ತನಗೆ ಇರತಕ್ಕ ಅಧಿಕಾರ ವ್ಯಾಪ್ತಿಯನ್ನು ಮೀರಿ ಹೋದಾಗ..

ಅಧ್ಯಕ್ಷರು : ಇದು ಹೇಗಿದ್ದರೂ ಜಂಟಿ ಸಲಹಾ ಸಮಿತಿಗೆ ಹೋಗುತ್ತದೆ. ಅಲ್ಲಿ ಹೋಗಿ ಸಂಪೂರ್ಣ ಚರ್ಚೆಯಾಗಿ ಮತ್ತೆ ಈ ಸದನದ ಒಪ್ಪಿಗೆಗೆ ಬರುತ್ತದೆ.

ಶ್ರೀ ಹೆಚ್. ವಿಶ್ವಾಂತಯ್ಯ : ಈ ಮಾತನ್ನು ಸರ್ಕಾರದವರು ಒಪ್ಪಿಕೊಂಡಲಿ ಇಲ್ಲಿ ಚರ್ಚೆ ಮಾಡತಕ್ಕದ್ದು ಅನವಶ್ಯಕ. ಆದುದರಿಂದ ನಾನೂ ಕೂಡ ಇದನ್ನೇ ಹೇಳಬೇಕೆಂದಿದ್ದೆ.

ಅಧ್ಯಕ್ಷರು : ಇದು ಎಕ್ಸಲೆಂಟ್ ಪಾಯಿಂಟ್

ಶ್ರೀ ಹೆಚ್. ವಿಶ್ವಾಂತಯ್ಯ : ನಾನು ಅವರ ಗಮನವನ್ನು ಸೆಳೆದೆ. ನಿಯಮ 83 (2) ರ ಪ್ರಕಾರ ಅವರು ಇವತ್ತು ಈ ಪರ್ಯಾಲೋಚನಾ ಪ್ರಸ್ತಾವವನ್ನು ಪರಿಶೀಲಿಸಬೇಕೆಂದು ಇಲ್ಲಿ ಇಟ್ಟಿದ್ದಾರೆ, ಇದಕ್ಕೆ ಬದಲಾಗಿ ಪರಿಷತ್ತಿನ ಸಮ್ಮತಿ ಪಡೆದು ಸಂಯುಕ್ತ ಸಲಹಾ ಸಮಿತಿಗೆ ಇದನ್ನು ಕಳುಹಿಸಬೇಕೆಂಬ ನಿರ್ಣಯವನ್ನು ಈ ಸಭೆಯ ಮುಂದಿಟ್ಟರೆ ಇದರ ಬಗ್ಗೆ ಹೆಚ್ಚಿನ ಚರ್ಚೆ ಮಾಡತಕ್ಕದ್ದು ಅನಾವಶ್ಯಕ.ಆದುದರಿಂದ ಸರ್ಕಾರದಿಂದ ನಾನು ತಿಳಿಯಬಯಸುತ್ತೇನೆ, ಒಂದು ವೇಳೆ ಇದನ್ನು ಸರ್ಕಾರದವರು ಸಂಯುಕ್ತ ಸಲಹಾ ಸಮಿತಿಗೆ ಕಳುಹಿಸುವುದಕ್ಕೆ ಒಪ್ಪಿಗೆ ಇದ್ದರೆ ಇದರ ಬಗ್ಗೆ ಹೆಚ್ಚು ಚರ್ಚೆಮಾಡಬೇಕಾದ ಅವಶ್ಯಕತೆ ಇಲ್ಲ. ಆದುದರಿಂದ ಅವರು ತಮ್ಮ ನಿಲುವನ್ನು ಸ್ಪಷ್ಟ ಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇದು ಸಲಹಾ ಸಮಿತಿಗೆ ಹೋಗುತ್ತದೆ.

ಶ್ರೀ ಕೆ.ಬಿ. ಕೋಳಿವಾಡ್ : ಇದು ಸಲಹಾ ಸಮಿತಿಗೆ ಹೋಗುವುದಾದರೆ ಇಲ್ಲಿ ಹೆಚ್ಚಿನ ವಿವರಣೆಯನ್ನು ಕೊಡುವುದಕ್ಕೆ ನಾನು ಹೋಗುವುದಿಲ್ಲ. ಇದು ಸ್ವಾಗತಾರ್ಹ ಮತ್ತು ಐತಿಹಾಸಿಕ ಒಂದು ಮಸೂದೆ ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತನ್ನು ಮೊಟಕುಗೊಳಿಸುತ್ತೇನೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಹೊಸ ಹೊಸ ಮಸೂದೆಗಳನ್ನು ತಂದು ಈ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರುತ್ತೇವೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಈಗಾಗಲೇ ಜಂಟಿ ಸಲಹಾಸಮಿತಿಗೆ ಇದನ್ನು ಕಳುಹಿಸಿಕೊಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ನಾನೂ ಕೂಡ ಈ ಸಲಹೆಯನ್ನು ಕೊಡುತ್ತೇನೆ. ಆದರೆ

ಒಂದು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತೇನೆ. ಬಹುಶ: ಇಂಥ ಒಂದು ಶಾಸನವನ್ನು ತರುವುದರಿಂದ ಅದಕ್ಕಾಗಿ ಇಂಥ ಪಂಚಸೂತ್ರವನ್ನು ತರುತ್ತೇವೆಂದು ಏನು ಹೇಳುತ್ತಿದ್ದೀರಿ ಇದು ಕೇಳುವುದಕ್ಕೆ ತುಂಬಾ ಇಂಪಾಗಿದೆ. ಆದರೆ ಇದನ್ನು ಕಾರ್ಯರೂಪಕ್ಕೆ ತರುವುದು ಅಷ್ಟೊಂದು ಸುಲಭ ಎಂದು ನನಗೆ ಅನಿಸುವುದಿಲ್ಲ....

SRI H. EKANTHAIAH : It is just the Directivee principles in the Constitution, if you go through.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆಂದರೆ ಈಗಿರತಕ್ಕ ಆಡಳಿತ ವ್ಯವಸ್ಥೆ ಏನಿದೆ ಇದನ್ನೇ ಸರಿಯಾದ ರೀತಿಯಲ್ಲಿ ಉಳಿಸಿಕೊಂಡರೆ ಸಾಕಾಗುತ್ತಿತ್ತು. ಇದನ್ನೇ ಹಾಳು ಮಾಡತಕ್ಕ ಪ್ರಯತ್ನ ನಮ್ಮಿಂದ ವ್ಯವಸ್ಥಿತವಾಗಿ ನಡೆಯುತ್ತಿದೆ. ಯಾವುದೇ ಸರ್ಕಾರದಲ್ಲಿ ಪ್ರತಿಭೆಗೆ, ಪ್ರಾಮಾಣಿಕತೆಗೆ, ಪರಿಶ್ರಮಕ್ಕೆ ಪುರಸ್ಕಾರ ಸಿಕ್ಕುವುದಿಲ್ಲ, ಅದು ಸರ್ಕಾರೀ ವ್ಯವಸ್ಥೆ ಇರಬಹುದು. ಅಥವಾ ಬೇರೆ ಯಾವುದೇ ವ್ಯವಸ್ಥೆ ಇರಲಿ ಅದು ಒಳ್ಳೆಯ ರೀತಿಯಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಒಂದು ಕಡೆ ಬೆರಳೆಣಿಸುವಷ್ಟು ಮಟ್ಟಿಗೆ ಆನಂದವಾಗಿ ಸುಖದ ಸುಪ್ಪತ್ತಿಗೆಯಲ್ಲಿ ಸರ್ಕಾರೀ ನೌಕರರು ಜೀವನ ಮಾಡುತ್ತಿದ್ದಾರೆ. ಅದೇ ಮತ್ತೊಂದು ಕಡೆ ಪ್ರಾಮಾಣಿಕವಾಗಿ ಕೆಲಸಮಾಡುವಂಥ ಬಹುತೇಕ ಜನರು ಈ ವಿಧಾನ ಸೌಧದ 3ನೇ ಮಹಡಿಯಲ್ಲಿರುತ್ತಾರಲ್ಲಾ, ಅಥವಾ ಈ ಬೆಂಗಳೂರಿನಲ್ಲಿ ಪ್ರಮುಖವಾದ ಸ್ಥಾನದಲ್ಲಿ ಯಾರಿದ್ದಾರೆ ಅವರ ಜೀವನದ ರೀತಿ, ವ್ಯವಸ್ಥೆ, ಅನುಕೂಲತೆಯನ್ನು ನೋಡಿ ದಿಗ್ಭ್ರಾಂತವಾಗಿ ಹಗಲೂ- ರಾತ್ರಿ ಕಛೇರಿಗಳಲ್ಲಿ ಪ್ರಾಮಾಣಿಕವಾಗಿ ದುಡಿದರೂ ಕೂಡ ಒಂದು ಸ್ವಂತ ಮನೆಯನ್ನು ಕಟ್ಟಿಕೊಂಡು ಗೌರವದಿಂದ ತನ್ನ ಹೆಂಡತಿ ಮಕ್ಕಳನ್ನು ಸಾಕುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ತೀರ್ಮಾನಕ್ಕೆ ಪ್ರಾಮಾಣಿಕ ಅಧಿಕಾರಿ ಬಂದಿದ್ದಾರೆ. ನಾವು ಇದನ್ನು ಪ್ರತಿಯೊಂದು ಹಂತದಲ್ಲೂ ನೋಡುತ್ತಿದ್ದೇನೆ. ಇವತ್ತು ಮಂತ್ರಿಮಂಡಲ ರಚನೆ ಮಾಡತಕ್ಕದ್ದು ಇರಬಹುದು ಅಥವಾ ಯಾರಿಗೋ ಒಬ್ಬರಿಗೆ ಒಂದು ಸ್ಥಾನಮಾನ ಕೊಡತಕ್ಕ ಸಂದರ್ಭ ಇರಬಹುದು, ಸರ್ಕಾರೀ ನೌಕರಿಯಲ್ಲಿ ಯೋಗ್ಯರನ್ನು ಪ್ರಾಮಾಣಿಕರನ್ನು ಮೇಲಕ್ಕೆ ತರತಕ್ಕ ಸಂದರ್ಭ ಇರಬಹುದು, ಈ ಯಾವುದೇ ಹಂತದಲ್ಲಿ ಇವತ್ತು ಪ್ರಾಮಾಣಿಕತೆಗೆ ಪುರಸ್ಕಾರ ಸಿಕ್ಕುತ್ತಿಲ್ಲ. ಇದರಲ್ಲಿ ಬದಲಾವಣೆ ತರಬೇಕೆಂಬ ಕಳಕಳಿ ಇರಬಹುದು. ಆದರೆ ಪ್ರತಿಭೆ ಇರತಕ್ಕ ವ್ಯಕ್ತಿಗೆ ಪುರಸ್ಕಾರ ಸಿಕ್ಕುತ್ತಿಲ್ಲ. ಇಂಥ ಉದಾಹರಣೆಗಳನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಆದುದರಿಂದ ನಾನು ಸಲಹೆ ಕೊಡತಕ್ಕದ್ದು ಈ ವ್ಯವಸ್ಥೆ ಇರಲಿ, ನಾವು ಇದನ್ನು ತರಬೇಕಾದ ಅವಶ್ಯಕತೆಯೇ ಇರಲಿಲ್ಲ. ಈಗಿರತಕ್ಕ ವ್ಯವಸ್ಥೆಯನ್ನೇ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ಯಾವ ಅಧಿಕಾರಿಗೆ ಏನು ಸೌಲಭ್ಯವನ್ನು ಕೊಡಬೇಕೋ ಅದನ್ನು ಅನಂತರ ಕೊಡೋಣ. ಆದರೆ ಶಾಸಕರ ಕಪಿಮುಷ್ಟಿಯಿಂದ, ಚುನಾಯಿತ ಪ್ರತಿನಿಧಿಗಳ ಕಪಿಮುಷ್ಟಿಯಿನದ ಈ ಸರ್ಕಾರಿ ನೌಕರರನ್ನು ಬಿಡಿಸುತ್ತೀರಾ? ಅಂದರೆ 3ವರ್ಷ ಒಂದು ಕಡೆ ಇದ್ದರೆ ಅವನು ಯಾವುದೇ ಮುಲಾಜೂ ಇಲ್ಲದೆ ಅಲ್ಲೇ ಗೌರವದಿಂದ ಕೆಲಸಮಾಡಬೇಕು. ಕೇವಲ ವರ್ಗಾವಣೆ ಮಾಡಿದರೆ ಈ ಸಮಸ್ಯೆ ಬಗೆಹರಿಯುತ್ತದೆಯೇ? ಇತ್ತೀಚಿನ ದಿವಸಗಳಲ್ಲಿ ವರ್ಗಾವಣೆ ಬಿಟ್ಟು ಬೇರೆ ಏನೂ ಆಗುವುದಿಲ್ಲ ಎನ್ನತಕ್ಕ ವಿಚಿತ್ರ ಪರಿಸ್ಥಿತಿ ಬಂದಿದೆ. ಸರ್ಕಾರ ಬದಲಾವಣೆ ಆದ

ತಕ್ಷಣ ತನಗೆ ಬೇಕಾದ ಅಧಿಕಾರಿಗಳನ್ನು ಅಲ್ಲಿಗೆ ವರ್ಗಾವಣೆ ಮಾಡಿಸಿಕೊಂಡು, ತನ್ನ ಮಾತನ್ನು ಕೇಳದವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿಸಿತಕ್ಕದ್ದನ್ನು ನಾವು ಪ್ರತಿದಿನ ನೋಡುತ್ತಿದ್ದೇವೆ. ಇವತ್ತು ಅನಿವಾರ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅವನು ಆ ಊರಿನಲ್ಲಿ ಗೌರವದಿಂದ ನೌಕರಿ ಮಾಡಬೇಕೆಂದಿದ್ದರೆ ಅವನು ಪ್ರಾಮಾಣಿಕ ನೌಕರನಾಗಿದ್ದರೂ ಕೂಡ ಅವನಿಗೆ ಆ ಶಾಸಕನ ಬೆಂಬಲ ಇಲ್ಲದಿದ್ದರೆ ಅಲ್ಲಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ವಾತಾವರಣವನ್ನು ನಾವು ಇವತ್ತು ಕಾಣುತ್ತಿದ್ದೇವೆ.

ಮಂತ್ರಿಗಳು ಬಂದರೆ ಆ ಕಾರಿನ ಹಿಂದೆ ಅಧಿಕಾರಿಗಳೆಲ್ಲರೂ ಬರಬೇಕು. ಆ ತಾಲ್ಲೂಕಿಗೆ, ಮಂತ್ರಿಗಳ ಇಲಾಖೆಗೆ ಸಂಬಂಧವಿಲ್ಲದಿದ್ದರೂ, ಯಾವುದೋ ಒಂದು ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಬಂದರೆ, ಅವರ ಇಲಾಖೆಯ ಎಲ್ಲರೂ ಬಂದು ಕೈ ಮುಗಿದು ಜೀ ಹುಜೂರ್ ಎಂದು ಹೇಳದೆ ಹೋದರೆ ಆಗಲೆ ಅಂತಹವರ ಮೇಲೆ ಕೆಂಗಣ್ಣು ಬೀಳುತ್ತದೆ. ಈ ರೀತಿ ಒಂದು ವಿಚಿತ್ರವಾದ ಪರಿಸ್ಥಿತಿ ಉಂಟಾಗಿ ಆಡಳಿತ ವ್ಯವಸ್ಥೆ ದಿನೇದಿನೇ ಹದಗೆಡುತ್ತಿದೆ. ನಾನು ಮಾನ್ಯ ಸಭಾನಾಯಕರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ನಿಮ್ಮ ಕಾಲದಲ್ಲಿಯಾದರೂ ಸಹ ಸರ್ಕಾರಿ ನೌಕರರು ಚುನಾಯಿತ ಪ್ರತಿನಿಧಿಗಳ ಆಶೀರ್ವಾದದಿಂದ ಬದುಕುವಂಥ ಒಂದು ವಿಚಿತ್ರವಾದ ಪರಿಸ್ಥಿತಿ ಏನಿದೆ ಇದನ್ನು ತಪ್ಪಿಸಿದರೆ ಅನೇಕ ಸುಧಾರಣೆಗಳನ್ನು ಮಾಡಿದಂತಾಗುತ್ತದೆ. ಒಬ್ಬ ವ್ಯಕ್ತಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಆದಾಕ್ಷಣಕ್ಕೆ ಅವನ ಸಮಸ್ಯೆ ಬಗೆಹರಿಯುವುದಿಲ್ಲ, ಅವನು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ, ಅವನು ನಿಜವಾಗಿಯೂ ಭ್ರಷ್ಟನಿದ್ದರೆ, ಸರಿಯಾಗಿ ಕೆಲಸ ಮಾಡದಿದ್ದರೆ ಅವನು ಇರುವ ಕಡೆಯೇ ಪನಿಷ್‌ಮೆಂಟ್ ಕೊಡಬೇಕು. ಅವನು ಯಾರೇ ಇರಬಹುದು; ವರ್ಗಾವಣೆ ಪನಿಷ್‌ಮೆಂಟ್ ಆಗುವುದಿಲ್ಲ. ಈ ರೀತಿ ಏನಾದರು ರೂಲ್ಸ್ ತಂದಾಗ ಅವನು ಎಚ್ಚರಿಕೆಯಿಂದ ಗೌರವದಿಂದ ಕೆಲಸ ಮಾಡುತ್ತಾನೆ. ಶಿಕಾರಿಪುರ ಬೇಡವೆಂದರೆ ಸೊರಬಾಕ್ಕೆ ಯಾರನ್ನೋ ಹಿಡಿದುಕೊಂಡು ಹೋಗುತ್ತಾನೆ, ಸೊರಬ ಬೇಡವೆಂದರೆ ಸಾಗರಕ್ಕೆ ಇನ್ನೊಬ್ಬರನ್ನು ಹಿಡಿದುಕೊಂಡು ವರ್ಗಾವಣೆ ಮಾಡಿಸಿಕೊಂಡು ಹೋಗುವಂಥ ಪ್ರವೃತ್ತಿ ಏನು ಬೆಳೆಯುತ್ತಿದೆ, ಇದನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡದಿದ್ದರೆ ಇನ್ನು ಯಾವ ಸುಧಾರಣೆ ತರಲಿಕ್ಕೆ ಸಾಧ್ಯವಿದೆ. ನಾನು ಹೇಳುತ್ತೇನೆ, ಯೋಗ್ಯರಿಗೆ ಪ್ರಾಮಾಣಿಕರಿಗೆ ಪ್ರತಿಭೆ ಇರುವವರಿಗೆ ಅವಕಾಶ ಸಿಕ್ಕುತ್ತಿಲ್ಲ. ಯಾರ ಬಗ್ಗೆ ಆರೋಪಗಳಿದೆ, ಅಂಥ ಭ್ರಷ್ಟ ಅಧಿಕಾರಿಗಳನ್ನು ಉನ್ನತ ಸ್ಥಾನಕ್ಕೆ ತರುವಂಥ ಪ್ರಯತ್ನವನ್ನು ಇವರು ಮಾಡುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷಣೆಯವರೇ, ಒಂದು ಘಟನೆ ನಡೆಯಿತು. ನಾನು ಬಹಳ ನೊಂದು ಇವತ್ತು ಮಾತನಾಡುತ್ತಿದ್ದೇನೆ. ಅವತ್ತು ರಾತ್ರಿ ನಿದ್ದೆಯನ್ನೇ ಮಾಡಲಿಲ್ಲ. ಒಬ್ಬ ಸರ್ಕಾರಿ ನೌಕರ ಶಿಕಾರಿಪುರ ತಾಲ್ಲೂಕಿನಲ್ಲಿ ಅವನಿಗೆ ಬರಬೇಕಾದಂಥ ಬ್ಯಾಲೆನ್ಸ್ ಅಮೌಂಟ್ 3-4 ವರ್ಷದಿಂದ ಬರಬೇಕಾದ್ದು ಬರಲಿಲ್ಲ; ಎರಡು ವರ್ಷ ಆಯಿತು. ಈ ಬಗ್ಗೆ ಸಿ.ಪಿ.ಐ. ಅವರನ್ನು ಭೇಟಿ ಮಾಡಿದ್ದೆ. ಏತಕ್ಕೆಂದರೆ ಆ ಸರ್ಕಾರಿ ನೌಕರ ಎರಡೂವರೆ ವರ್ಷದ ಹಿಂದೆ ರಿಟೈರ್ಡ್ ಆಗಿದ್ದ. ಅವನಿಗೆ ಬರತಕ್ಕಂಥ ಪರಿಹಾರದ ದುಡ್ಡು ಬರಲಿಲ್ಲವೆಂದು ಹೇಳಿ ಸಿ.ಪಿ.ಐ. ಕಛೇರಿಯಲ್ಲಿ ಕೇಳಿದೆ. ಹೀಗಾದರೆ ನಾವು ಕೆಲಸ ಮಾಡುವುದಾದರು ಹೇಗೆ, ನಮ್ಮಂಥ ಶಾಸಕರಿಗೆ ಗೌರವವಿಲ್ಲದಂಥ ಪರಿಸ್ಥಿತಿ ಬಂದರೆ, ಹೇಗೆ ಮತ್ತು ನಾವು ಫೈಲ್ ಹಿಂದೆ ಓಡಾಡುವಂಥ ಪರಿಸ್ಥಿತಿಗೆ ಬಂದರೆ ಹೇಗೆ? ಆ ಪರಿಸ್ಥಿತಿಗೆ ನಮ್ಮನ್ನು ತರಬೇಡಿ ಎಂದು ಅಲ್ಲಿ ಕೂಗಾಡಿ

ಆ ಸರ್ಕಾರಿ ನೌಕರನಿಗೆ ಅನುಕೂಲ ಮಾಡಿಕೊಡುವಂಥ ಪ್ರಯತ್ನ ನಾನು ಮಾಡಿದಾಗ ಅಲ್ಲಿರುವಂಥ ಸರ್ಕಾರಿ ನೌಕರರ ಸಂಘದವರು ಆ ನೌಕರನ ಪರವಾಗಿ ಧರಣಿ ಮಾಡಬೇಕಾಗಿತ್ತು. ಆ ನೌಕರನಿಗೆ ತಕ್ಷಣ ಪರಿಹಾರ ಕೊಡಬೇಕಾಗಿತ್ತು. ಆದರೆ ಯಡಿಯೂರಪ್ಪ ಆ ನೌಕರನ ಪರವಾಗಿ ಹೋದದ್ದರಿಂದ ನನ್ನ ವಿರುದ್ಧ ಧರಣಿ ಮಾಡಿದರು. ನಂತರ ಅದು ಇಲ್ಲಿ ಚರ್ಚೆ ಆಯಿತು. ನಾನು ತಪ್ಪು ಮಾಡಿದ್ದೇನೆಂದು ಆರೋಪ ಮಾಡಿದರು. ಚರ್ಚೆ ನಡೆಯಲಿ, ಚಿಂತೆ ಇಲ್ಲ; ಶಾಸಕರ ಬಗ್ಗೆ ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ಏನೆಂದರೆ ಸಾಮಾನ್ಯ ಜನರಿಗೆ ಯಾರಿಗೆ ಸಮಸ್ಯೆ ಇದೆ, ಯಾರಿಗೆ ಬೇರೆಯವರ ಬೆಂಬಲವಿಲ್ಲ ಅಂಥವರ ಪ್ರತಿಯೊಂದು ಫೈಲ್ ಹಿಂದೆ ಸಂಬಂಧಪಟ್ಟ ಅಧಿಕಾರಿಗಳ ಕಛೇರಿಗೆ ಅಲೆಯುವಂಥ ಸ್ಥಿತಿ ಇವತ್ತು ಚುನಾಯಿತ ಪ್ರತಿನಿಧಿಗಳಿಗೆ ಬಂದಿದೆ. 3-4 ವರ್ಷಗಳಾದರೂ ಫೈಲ್ ಮೂವ್ ಆಗದಿರತಕ್ಕಂಥ ವಿಚಿತ್ರ ಪರಿಸ್ಥಿತಿ ಇದೆ. ಅಲ್ಲಿ ಬಿಗಿಯಾದಂಥ ಆಡಳಿತ ವ್ಯವಸ್ಥೆಯಾಗದಿದ್ದರೆ ಅಲ್ಲಿರುವಂಥ ಮುಖ್ಯ ಅಧಿಕಾರಿಗಳು ತಿಂಗಳಿಗೆ ಒಮ್ಮೆ ವಾರಕ್ಕೊಮ್ಮೆ ಯಾವ ಫೈಲು ಬಂತು, ಯಾವುದು ಹೋಗಿಲ್ಲ ಎನ್ನುವುದನ್ನು ನೋಡಿಕೊಳ್ಳುವಂಥ ಪ್ರಾಮಾಣಿಕ ಪ್ರಯತ್ನ ಮಾಡುವುದಿಲ್ಲ, ಅಂಥ ಅಧಿಕಾರಿಯನ್ನು ನೋಡಿಕೊಳ್ಳುವಂಥ ನೈತಿಕ ಶಕ್ತಿ ಸರ್ಕಾರಕ್ಕೆ ಇಲ್ಲದಿದ್ದರೆ ಈ ರೀತಿ ಏನೋ ಒಂದು ಶಾಸನವನ್ನು ತರುವುದರಿಂದ ಬದಲಾವಣೆಯಾಗುತ್ತದೆನ್ನುವಂಥ ನಿರೀಕ್ಷಣೆಯಲ್ಲಿ ನಾನು ಇಲ್ಲ.

ಒಬ್ಬ ಮಾನ್ಯ ಸದಸ್ಯರು : ಈ ಹಿಂದೆ ಒಬ್ಬ ಲೆಕ್ಚರರ್‌ನ್ನು ಮಂಗಳೂರು ಪಾಲಿಟೆಕ್ನಿಕ್‌ನಿಂದ ಒಂದು ಕಿಲೋಮೀಟರ್ ದೂರವಿರುವ ಬೇರೆ ಪಾಲಿಟೆಕ್ನಿಕ್‌ಗೆ ಇದೇ ಮಾನ್ಯ ಸದಸ್ಯರು ಟ್ರಾನ್ಸ್‌ಫರ್ ಮಾಡಿಸಿಕೊಂಡಿರುತ್ತಾರೆ. ಆದರೆ ಈಗ ಮಾನ್ಯ ಯಡಿಯೂರಪ್ಪನವರು ಇದರಿಂದ ಆ ರೀತಿಯಾಗುತ್ತದೆ, ಈ ರೀತಿಯಾಗುತ್ತದೆಂದು ಹೇಳುವುದಕ್ಕಿಂತ ತಾವು ತಮ್ಮ ಮನೆಯಿಂದಲೇ ಇಂಥಾದ್ದನ್ನು ಪ್ರಾರಂಭ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಒಳ್ಳೆಯ ಸಲಹೆ ಕೊಟ್ಟಿದ್ದೀರಿ. ಸನ್ಮಾನ್ಯ ಅಧ್ಯಕ್ಷಣಿಯವರೇ ನಾನು ಒಂದು ಮಾತನ್ನು ಹೇಳುತ್ತೇನೆ. ಅವರು ಹೇಳಿದ್ದು ನಿಜ ಇದೆ. ಇವತ್ತು ಪ್ರತಿನಿತ್ಯ 100ಕ್ಕೆ 90 ಭಾಗ ಸರ್ಕಾರಿ ನೌಕರರು ಶಾಸಕರ ಕೊಠಡಿಗೆ ಅಲೆಯುವಂತಹ ವಿಚಿತ್ರವಾದ ಪರಿಸ್ಥಿತಿ ಬಂದಿದೆ. ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ; ಇದಕ್ಕೆ ವಿರುದ್ಧವಾಗಿರುವವನು ನಾನು. ನಮ್ಮ ಸ್ನೇಹಿತರು ಒಬ್ಬರು ಹೇಳಿದರು: ಆಯಿತಲ್ಲ, ಒಬ್ಬ ಶಾಸಕನಾಗಿ ಕಳೆದ 7-8 ವರ್ಷಗಳಿಂದ ನಾನು ಕೆಲಸ ಮಾಡಿದ್ದೇನೆ. ದಯವಿಟ್ಟು ಯಾವ ಯಾವ ಇಲಾಖೆಯಲ್ಲಿ ಯಡಿಯೂರಪ್ಪ ಅಥವಾ ಬಿ.ಜೆ.ಪಿ. ಶಾಸಕರು ಎಷ್ಟು ವರ್ಗಾವಣೆ ಮಾಡಿಸಿದ್ದಾರೆ ಆ ಪಟ್ಟಿಯನ್ನು ಮಾಡಿ, ಅದೇ ರೀತಿಯಲ್ಲಿ ಬೇರೆ ಶಾಸಕರು ಎಷ್ಟು ಮಾಡಿದ್ದಾರೆ ಅದನ್ನು ಪಟ್ಟಿಮಾಡಿ. ವರ್ಗಾವಣೆಗೆ ಶಾಸಕರೇ ಬರುವಂಥ ಅಗತ್ಯವಿಲ್ಲವೆಂಬ ಕಾನೂನು ಮಾಡಿ. ಸಂಬಂಧಪಟ್ಟ ಇಲಾಖೆಯ ಉನ್ನತ ಅಧಿಕಾರಿಗಳು ವರದಿಯನ್ನು ಕೊಡಲಿ; ಮೂರು ವರ್ಷಗಳಾದ ಮೇಲೆ ಯಾರಿಗಾದರೂ ತೊಂದರೆ ಇದ್ದರೆ ಸಹಜವಾಗಿ ವರ್ಗಾವಣೆಯಾಗುವಂಥ ವ್ಯವಸ್ಥೆಯಾದಾಗ ಮಾತ್ರ ಶಾಸಕರು ಈ ರೀತಿ ಕಚೇರಿಗಳನ್ನು ಅಲೆಯುವಂಥ ವಿಚಿತ್ರ ಪರಿಸ್ಥಿತಿ ಬರುವುದಿಲ್ಲ; ನಿಮ್ಮ ಹತ್ತಿರ ವರ್ಗಾವಣೆಯ ವಿಚಾರವಾಗಿ ಬಂದಿಲ್ಲವೆಂದು ನಾನು ಹೇಳುತ್ತಿಲ್ಲ.

ಆದರೂ ಎಲ್ಲ ಕಡೆ ಈ ಒಂದು ವಿಚಿತ್ರ ಪರಿಸ್ಥಿತಿ ಇದೆ. ಎಲ್ಲಿ ಹೋದರೂ ಅಲ್ಲಿ ವರ್ಗಾವಣೆಗಾಗಿ ದುಂಬಾಲು ಬೀಳುವ ವಿಚಿತ್ರ ಪರಿಸ್ಥಿತಿ ಇದೆ. ಆದ್ದರಿಂದ ನಿಮ್ಮ ಕಾಲದಲ್ಲಾದರೂ ಈ ಒಂದೂ ವಿಚಿತ್ರ ಪರಿಸ್ಥಿತಿಯನ್ನು ತಡೆಗಟ್ಟುವ ಬಗ್ಗೆ ಪ್ರಯತ್ನ ಮಾಡಿ. ವರ್ಷ ಪೂರ್ಣ ಈಗಲೂ ವರ್ಗಾವಣೆಗೋಸ್ಕರ ಅಧಿಕಾರಿಗಳು ಕಾಯುವುದು ಇದ್ದೇ ಇದೆ. ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳ ಕಛೇರಿಗೆ ಸುತ್ತುವ ಪರಿಸ್ಥಿತಿಯನ್ನು ಹೋಗಲಾಡಿಸಲು ನೀವು ಒಂದು ನಿರ್ಧಿಷ್ಟ ಕಾರ್ಯಕ್ರಮವನ್ನು ರೂಪಿಸುವ ಪ್ರಯತ್ನ ಮಾಡಿದರೆ ನನಗೆ ಸಂತೋಷವಾಗುತ್ತದೆ. ತಾವು ಇಲ್ಲವೇ ನಾವು ಪ್ರವಾಸ ಮಾಡಿದಾಗ ಶಾಸಕರ, ಮಂತ್ರಿಗಳ ಹಿಂದುಮುಂದು ಅಧಿಕಾರಿಗಳು ಸುತ್ತುವರಿಯಬೇಕು, ಇಲ್ಲದಿದ್ದರೆ ಅವರು ಅಪರಾಧ ಮಾಡಿದ್ದಾರೆಂದು ಅವರನ್ನು ಕೆಂಗಣ್ಣಿನಿಂದ ನೋಡುವ ಪ್ರವೃತ್ತಿ ಹೋಗಬೇಕು. ಅಧಿಕಾರಿಗಳು ಸ್ವತಂತ್ರವಾಗಿ ಕೆಲಸ ಮಾಡದಿದ್ದರೆ ಬಿಗಿಯಾದ ಕ್ರಮ ಕೈಗೊಳ್ಳುವಂತೆ ಅಲ್ಲಿನ ಇಲಾಖಾ ಮುಖ್ಯ ಅಧಿಕಾರಿಗಳಿಗೆ ಅಧಿಕಾರ ಕೊಟ್ಟರೆ ಆಡಳಿತದಲ್ಲಿ ಸುಧಾರಣೆ ತರುವುದಕ್ಕೆ ಸಾಧ್ಯವಿದೆ ಎಂಬ ನಂಬಿಕೆ ಇಟ್ಟುಕೊಂಡಿರುವ ವ್ಯಕ್ತಿ ನಾನು. ಇವತ್ತಿಗೂ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಒಂದು ಅವ್ಯವಸ್ಥೆ ತಾಂಡವವಾಡುತ್ತಿದೆ. ಅಧಿಕಾರಿಗಳು ಬಹಿರಂಗವಾಗಿ ಹೇಳುತ್ತಾರೆ, ನಿಮ್ಮದು ಏನು ಬಿಡಿ, ನಿಮ್ಮ ಶಿಕಾರಿಪುರ ತಾಲ್ಲೂಕಿಗೆ ಬರುವುದಿಲ್ಲ. ನೀವು ಎಷ್ಟಿದ್ದರೂ ವಿರೋಧ ಪಕ್ಷದವರು, ನಿಮ್ಮಲ್ಲಿಗೆ ಬಂದರೆ ಅಲ್ಲಿ ನಮಗೆ ರಕ್ಷಣೆ ಸಿಗುವುದಿಲ್ಲವೆಂಬ ಮಾತುಗಳು ಕೇಳಿಬರುತ್ತಿವೆ. ಈಗಾಗಲೇ ಒಂದು ಉದಾಹರಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿರುತ್ತೇನೆ. ಸೊರಬದಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ಒಂದು ಶ್ರೀಗಂಧದ ಲೂಟಿ ತಪ್ಪಿಸುವ ಪ್ರಯತ್ನ ಮಾಡಿದ. ಆತ ಬಹಳ ಪ್ರಾಮಾಣಿಕ ಅಧಿಕಾರಿ. ಆತನನ್ನು ಯಡಿಯೂರಪ್ಪ ಅಲ್ಲಿಗೆ ವರ್ಗಾವಣೆ ಮಾಡಿಸಿದ ಎಂಬ ಕಾರಣವನ್ನು ಇಟ್ಟುಕೊಂಡು ಒಬ್ಬಳು ಹುಚ್ಚಿಯೊಡನೆ ಆ ಅಧಿಕಾರಿಯ ಅನೈತಿಕ ಸಂಬಂಧ ಇತ್ತು ಎಂದು ದೂರು ಕೊಡಿಸಿ ಅವನನ್ನು 6 ತಿಂಗಳ ಕಾಲ ಸಸ್ಪೆನ್‌ಷನ್ ನಲ್ಲಿ ಇಡಿಸಿದರು. ಆ ಬಗ್ಗೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದೆ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ತಂದೆ. ಇಷ್ಟಾದರೂ ಆ ಅಧಿಕಾರಿಗೆ 6 ತಿಂಗಳ ಕಾಲ ಪನಿಷ್‌ಮೆಂಟ್ ಆಯಿತು. ಯಡಿಯೂರಪ್ಪ ವರ್ಗಾವಣೆ ಮಾಡಿಸಿದ ಎಂಬ ಒಂದೇ ಒಂದು ಕಾರಣಕ್ಕಾಗಿ ಇಷ್ಟೆಲ್ಲಾ ನಡೆಯಿತು. ಈ ಬಗ್ಗೆ ನಾನು ಹತ್ತು ಬಾರಿ ಗೃಹ ಸಚಿವರಿಗೆ ಅವರ ಮನೆಗೆ ಹೋಗಿ ಹೇಳಿದ್ದೇನೆ. ಕೊನೆಗೆ ತನಿಖೆಯ ಸಂದರ್ಭದಲ್ಲಿ ಹುಚ್ಚಿ ಹೇಳಿಕೆ ಕೊಡುತ್ತಾಳೆ. ನನಗೂ ಈತನಿಗೂ ಯಾವುದೇ ಸಂಬಂಧವಿಲ್ಲವೆಂದು. ಶಿರಾಳಕೊಪ್ಪದಲ್ಲಿ ಹೋದ ವರ್ಷ ಈ ಘಟನೆ ನಡೆದಿದೆ. ನಾನು ಹತ್ತು ಬಾರಿ ಹೋಮ್ ಮಿನಿಸ್ಟರ್ ಮನೆಗೆ ಹೋಗಿದ್ದೆ. ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಾನು ಶಿಕಾರಿಪುರ ತಾಲ್ಲೂಕಿನ ಒಂದು ಉದಾಹರಣೆ ಮಾತ್ರ ಕೊಡುವುದಕ್ಕೆ ಹೊರಟಿಲ್ಲ. ಈ ಪ್ರವೃತ್ತಿ ಎಲ್ಲಾ ಕಡೆ ಇದೆ. ಈ ಪ್ರವೃತ್ತಿಯಿಂದ ಅಧಿಕಾರಿಗಳು ಗೌರವದಿಂದ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥ ಪರಿಸ್ಥಿತಿ ಇದೆ. ಆಡಳಿತದಲ್ಲಿ ಬದಲಾವಣೆ ತರಲು ನಿಮಗೆ ನೈತಿಕ ಅಧಿಕಾರ ಇಲ್ಲ. ಏಕೆಂದರೆ ಪ್ರಾಮಾಣಿಕತೆಯ ಪುರಸ್ಕಾರವಿಲ್ಲ.

ಇವತ್ತಿನ ದಿವಸ ಭ್ರಷ್ಟರಿಗೆ ಸ್ಥಾನಮಾನ ಕೊಡುತ್ತಿದ್ದೀರಿ; ನಿಮ್ಮಂಥಹವರು ಇಂಥ ಬಿಲ್ ತರುವುದರಿಂದ ಉಪಯೋಗವಿಲ್ಲ. ಇಂಥವರ ಕಾಲದಲ್ಲಿ ಇಂಥ ಶಾಸನ ಮಾಡುವುದರಿಂದ ಬದಲಾವಣೆ ಆಗುತ್ತದೆಂಬ ನಂಬಿಕೆ ನನಗಿಲ್ಲ. ಈ

ರೀತಿ ಪಂಚಸೂತ್ರ ಮಸೂದೆಯನ್ನು ತಂದಾಗ ಅದನ್ನು ಕಾರ್ಯರೂಪಕ್ಕೆ ತರತಕ್ಕ ಕಳಕಳಿಯ ಆಡಳಿತ ವ್ಯವಸ್ಥೆ ಇರದಿದ್ದರೆ ಏನೂ ಪ್ರಯೋಜನವಿಲ್ಲವೆಂದು ಹೇಳಬಹುದು. ನಿಮ್ಮ ಮಂತ್ರಿ ಮಂಡಲಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇದೆ; ಮಾಡಿ ಒಳ್ಳೆಯ ಶಕ್ತಿ ಇರುವವರು, ದಕ್ಷರು, ಪ್ರಾಮಾಣಿಕರು, ಪ್ರತಿಭಾವಂತರು, ಅನುಭವಸ್ಥರು ಏನಿದ್ದಾರೆ ಅಂಥ ಅಧಿಕಾರಿಗಳ ಸಹಕಾರವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದರೆ ಇಂತಹ ಭ್ರಷ್ಟಾಚಾರ ಆರ್ಥಿಕ ದಿವಾಳಿತನ ಎಲ್ಲದಕ್ಕೂ ಕಡಿವಾಣ ಬೀಳುತ್ತಿತ್ತು. ಒಳ್ಳೆಯ ಅಧಿಕಾರಿಗಳು ಆಯ್ಕೆ ಮಾಡಿಕೊಳ್ಳಿ; 20 ಮಂದಿ ಜಿಲ್ಲಾಧಿಕಾರಿಗಳು ಮತ್ತು 20 ಜನ ಎಸ್.ಪಿ.ಗಳನ್ನು ನೇರವಾಗಿ ಮುಖ್ಯಮಂತ್ರಿಗಳ ಕಂಟ್ರೋಲಿಗೆ ಇಟ್ಟುಕೊಳ್ಳಿ. ಯಡಿಯೂರಪ್ಪ ಮತ್ತೊಬ್ಬರು ಹೇಳಿದರೆಂದು ಹೇಳಬೇಡಿ. ಎಲ್ಲಿಯಾದರೂ ಲೋಪದೋಷವಾದರೆ ನಿನ್ನನ್ನು ಹ್ಯಾಂಗ ಮಾಡುತ್ತೇವೆಂದು ಹೇಳಿ ನಿಮ್ಮ ಒಂದು ಕಂಟ್ರೋಲ್‌ನಲ್ಲಿ ಇಟ್ಟುಕೊಂಡರೆ, ಬಿಗಿಯಾದ ಆಡಳಿತ ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಇರುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ನಿಮ್ಮಿಂದ ಇಲ್ಲಿಯವರೆಗೆ ಮಾಡುವುದಕ್ಕಾಗಲಿಲ್ಲ. ಇನ್ನು ಮುಂದೆಯಾದರೂ ಈ ರೀತಿ ಶಾಸನ ತರುವುದಕ್ಕೆ ಮುಂಚೆ ಆ ರೀತಿ ಪ್ರಾಮಾಣಿಕವಾಗಿ ಆಡಳಿತವನ್ನು ಬಿಗಿ ಮಾಡುವ ಪ್ರಯತ್ನ ಮಾಡಿ. ಈ ಶಾಸನ ಜಂಟಿ ಸಲಹಾ ಸಮಿತಿಗೆ ಹೋಗಿ, ಸಮಿತಿಯು ವರದಿ ಕೊಟ್ಟು ಬರುವ ವೇಳೆಗೆ ಯಾರು ಯಾರು ಎಲ್ಲೆಲ್ಲಿರುತ್ತಾರೋ ಗೊತ್ತಿಲ್ಲ. ಬರೀ ಶಾಸನ ತರುವುದು ಮುಖ್ಯ ಅಲ್ಲ; ಸಾಮಾನ್ಯ ಜನರಿಗೆ ನ್ಯಾಯ ಒದಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ಏನಾಗಿದೆ ಎಂದರೆ ಹರಿಜನ ಗಿರಿಜನರು ಸರ್ಕಾರದಿಂದ ಬರಬೇಕಾದ 50 ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳ ಮನೆ ಬಾಗಿಲಿಗೆ ತಿರುಗಬೇಕಾಗಿದೆ. ತಿಂಗಳಿಗೊಮ್ಮೆ ತಲುಪಬೇಕಾದ ಹಣಕ್ಕೆ 2-3 ತಿಂಗಳಾದರೂ ಕಾಯ್ದು 2-3 ಸಾರಿ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಹೋಗಿಬರಬೇಕಾಗಿದೆ. ಹೆರಿಗೆ ಭತ್ಯ ಎಂದು ಏನು ಕೊಡುತ್ತೀರಿ ಅದು ಹೆರಿಗೆಯಾದ 6 ತಿಂಗಳ ನಂತರ ಸಿಗುತ್ತದೆ. ಸರ್ಕಾರ ತಂದಿರುವ ಕಾರ್ಯಕ್ರಮಗಳು ಸಮಯಕ್ಕೆ ಸರಿಯಾಗಿ ಜನತೆಗೆ ತಲುಪುವ ವ್ಯವಸ್ಥೆ ಆಗಬೇಕು. ಈ ಬಗ್ಗೆ ಮಂತ್ರಿಮಂಡಲಕ್ಕೆ ಕಳಕಳಿ ಇರಬೇಕಾಗುತ್ತದೆ. ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕೆಂಬ ಚಿಂತನೆ ಮಾಡುವ ಪ್ರಾಮಾಣಿಕರ ಕೊರತೆ ನಿಮ್ಮಲ್ಲಿ ಇದೆ. ಇದು ಬದಲಾವಣೆ ಆಗಬೇಕು. ಈ ದಿಸೆಯಲ್ಲಿ ವಿಶೇಷವಾಗಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಈ ಮಸೂದೆಯನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿ ಕೊಡುವುದರ ಜೊತೆಗೆ ಆಡಳಿತದಲ್ಲಿ ಸುಧಾರಣೆ ತರುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇನ್ನು ಮುಂದಾದರೂ ಒಳ್ಳೆಯ ಆಡಳಿತವನ್ನು ಕೊಡುವ ಪ್ರಯತ್ನ ಮಾಡಬೇಕು. ಕಳೆದ ವರ್ಷವನ್ನು ಕರಾಳ ವರ್ಷವೆಂದು ಕರೆದರೂ, ಎಲ್ಲ ರಂಗದಲ್ಲಿ ವೈಫಲ್ಯತೆ ಕಂಡುಬಂದರೂ ಇನ್ನು ಮುಂದೆ ಅಂಥದಕ್ಕೆ ಅವಕಾಶವಾಗದಿರಲಿ; ನಿಮಗೆ ದೇವರು ಸದ್ಬುದ್ಧಿ ಕೊಡಲಿ. ಈಗಲಾದರೂ ಚಿಂತನೆ ಪ್ರಾರಂಭವಾಗಲಿ ಎಂದು ಹೇಳುತ್ತಾ ಈ ಮಸೂದೆಯನ್ನು ಜಂಟಿ ಸಲಹಾ ಸಮಿತಿಗೆ ಒಪ್ಪಿಸಬೇಕೆಂದು ಒತ್ತಾಯ ಮಾಡಿ, ಸಭಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

5.00 ಪಿ.ಎಂ

+ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕವನ್ನು ಏನು ಮಂಡಿಸಿದ್ದಾರೆ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈಗಿರುವ ರೀತಿಯಲ್ಲಿ ಅಲ್ಲ. ನಮ್ಮ

ಆಡಳಿತ ವ್ಯವಸ್ಥೆ ಏನಿದೆ, ಇದರಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದುದು ಒಂದು ನೀತಿ ನಿರೂಪಣೆ, ಮತ್ತೊಂದು ನೀತಿಯನ್ನು ಜಾರಿ ಮಾಡುವಾಗ ಅನುಸರಿಸಬೇಕಾದ ಪದ್ಧತಿ. ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯಲ್ಲಿ ವಿವಿಧ ಸಿದ್ಧಾಂತದಲ್ಲಿ ನಂಬಿಕೆ ಇರುವ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಗೆದ್ದು ಬಂದು ತಮ್ಮದೇ ಆದ ಸರ್ಕಾರವನ್ನು ಸ್ಥಾಪನೆ ಮಾಡಬಹುದು. ಸ್ಥಾಪನೆ ಮಾಡಿದಂಥ ಸಂದರ್ಭದಲ್ಲಿ ತಮ್ಮ ಕಾರ್ಯ ನೀತಿಯನ್ನು ನಿರ್ಧರಿಸುವಾಗ ಆ ಸಿದ್ಧಾಂತಗಳಿಗೆ ಬದ್ಧರಾಗಿ ಆ ನೀತಿಗಳನ್ನು ನಿರ್ಧರಿಸಬೇಕಾದುದು ಸಹ ಔಚಿತ್ಯ ಮತ್ತು ಅವಶ್ಯ. ಏಕೆಂದರೆ ಜನ ಅವರಿಗೆ ಬೆಂಬಲವನ್ನು ಕೊಟ್ಟಿರುತ್ತಾರೆ. ಆದರೆ ಮತ್ತೊಂದು ಮುಖ್ಯವಾದ ವ್ಯವಸ್ಥೆ ಎಂದರೆ ಯಾವುದೇ ಒಂದು ನೀತಿ ತಾವು ನಿರ್ಧಾರ ಮಾಡಿದರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಆಡಳಿತಾಂಗ ಏನಿದೆ ಅದು ನಿಷ್ಪಕ್ಷಪಾತವಾಗಿ ರಾಜಕೀಯ ಅತೀತವಾದ ರೀತಿಯಲ್ಲಿ ಅದನ್ನು ಜಾರಿ ಮಾಡಬೇಕಾದುದು ಅತ್ಯಂತ ಅವಶ್ಯಕ ನಮ್ಮಲ್ಲಿರುವ ಆಡಳಿತ ವ್ಯವಸ್ಥೆ ವೆಸ್ಟ್ ಮಿನಿಸ್ಟರ್ ಮಾದರಿ. ವ್ಯವಸ್ಥೆಯಲ್ಲಿ ಹೆಚ್ಚು ಮಹತ್ವವನ್ನು ಕಾರ್ಯನೀತಿಗೆ ಕೊಟ್ಟಿದ್ದೇವೆ. ಆದರೆ ಆ ಕಾರ್ಯನೀತಿಯನ್ನು ಜಾರಿ ಮಾಡುವಾಗ ನಾನ್ ಪೊಲಿಟಿಕಲ್ಲಾಗಿ ಇದನ್ನು ನೋಡಬೇಕು ಎಂಬ ಮಾತನ್ನು ಹೊರಗಡೆ ಒಪ್ಪುತ್ತೇವೆ. ಆದರೆ ಮುಖ್ಯವಾಗಿ ಜಾರಿ ಮಾಡುವಾಗ ರಾಜಕೀಯವಾಗಿ ಹಸ್ತಕ್ಷೇಪವಾಗುತ್ತಿದೆ ಎಂಬುದನ್ನು ಎಲ್ಲ ಕಾಲದಲ್ಲಿಯೂ ಕಂಡಿದ್ದೇವೆ. ಒಂದು ಕಾಲದಲ್ಲಿ ಇರಲಿಲ್ಲ ಎಂದು ಹೇಳುತ್ತಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಇದು ಹೆಚ್ಚು ಹೆಚ್ಚಾಗಿ ರಾಜಕೀಯ ಹಸ್ತಕ್ಷೇಪ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಜಾಸ್ತಿ ನಡೆಯುತ್ತಾ ಇರುವುದರಿಂದ ಅನೇಕ ವಿಧವಾದ ತೊಂದರೆಗಳನ್ನು ಅನೇಕ ವಿಧವಾದ ಸಂಕಷ್ಟಗಳನ್ನು ನಾವು ಆಡಳಿತ ವ್ಯವಸ್ಥೆಯಲ್ಲಿ ಕಾಣುತ್ತಿದ್ದೇವೆ. ಇವತ್ತು ಮುಖ್ಯವಾಗಿ ಪರಿಶೀಲನೆ ಮಾಡಬೇಕಾದುದು ಕೇವಲ ನಮ್ಮ ಘೋಷಣೆಗಳಲ್ಲಿ ಅಲ್ಲ. ಈ ಕಾನೂನನ್ನು ನೋಡಿದಾಗ ಸಂವಿಧಾನ ಜ್ಞಾಪಕಕ್ಕೆ ಬರುತ್ತದೆ. ಸಂವಿಧಾನದಲ್ಲಿ ಡೈರೆಕ್ಟೀವ್ ಪ್ರಿನ್ಸಿಪಲ್ ಎಂದು ಏನು ಹೇಳುತ್ತಾರೆ; ನಿರ್ದೇಶಕ ತತ್ವಗಳನ್ನು ಏನು ಹೇಳುತ್ತಾರೆ, ಅದನ್ನೇ ಇದರಲ್ಲಿ ಹೇಳುತ್ತಾರೆ. ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಆಡಳಿತದಲ್ಲಿ ಪಂಚ ಸೂತ್ರ ತತ್ವಗಳು ಈಗ 5ನೇ ವಿಧಿ ತಾವು ನೋಡಿ. ಸರ್ಕಾರವು ಆಡಳಿತಕ್ಕೆ ಸಂಬಂಧ ಪಟ್ಟ ಕಾರ್ಯನೀತಿಯನ್ನು ಮತ್ತು ಪದ್ಧತಿಯನ್ನು ಸರಳೀಕರಣಗೊಳಿಸುವುದಕ್ಕಾಗಿ ಅನುಚಿತ ವಿಳಂಬವನ್ನು ತಡೆಯುವ ಮತ್ತು ಆಡಳಿತದ ಎಲ್ಲ ಹಂತದಲ್ಲೂ ಅಧಿಕಾರಿಗಳು ಭಾಗವಹಿಸುವಂತೆ ಮಾಡುವ ಉದ್ದೇಶಕ್ಕಾಗಿ ಆಡಳಿತಾತ್ಮಕ ಅಧಿಕಾರಿಗಳ ಪ್ರತ್ಯಾನಿಯೋಜನೆಯ ಉಪಬಂಧ ಕಲ್ಪಿಸುವುದಕ್ಕಾಗಿ, ರಾಜ್ಯ ವಿಧಾನಮಂಡಲ ಸದನಗಳಲ್ಲಿ ಅಥವಾ ಯಾವುದೇ ಸಮಿತಿಯಲ್ಲಿ ನೀಡಲಾದ ಆಶ್ವಾಸನೆ, ನ್ಯಾಯಾಲಯ ಅಥವಾ ನ್ಯಾಯಾಧೀಕರಣಗಳ ನಿರ್ದೇಶನಗಳಿಗೆ ವಿಧೇಯವಾಗಿರುವುದಕ್ಕಾಗಿ ಅಥವಾ ಆರ್ಥಿಕ ಔಚಿತ್ಯತೆಯ ಸಿದ್ಧಾಂತಗಳ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಸಾರ್ವಜನಿಕ ಹೊಣೆಗಾರಿಕೆಯನ್ನು ಸಾಧಿಸುವುದಕ್ಕಾಗಿ, ಸಾರ್ವಜನಿಕ ನೌಕರರ ಕರ್ತವ್ಯದ ನೆರವೇರಿಕೆಯ ನಿರ್ಧರಣೆಯನ್ನು ಮಾಡಲು ಮೇಲ್ವಿಚಾರಣ ಪದ್ಧತಿಯನ್ನು ಆರಂಭಿಸುವುದಕ್ಕಾಗಿ ಮತ್ತು ಪರಿಶೀಲನೆ ನಡೆಸುವುದಕ್ಕಾಗಿ, ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳುವುದಕ್ಕಾಗಿ ಶ್ರಮಿಸತಕ್ಕದ್ದು; ಅದರಂತೆ ಇಲ್ಲಿ ಬೇರೆ ಬೇರೆ ಅಧ್ಯಾಯಗಳನ್ನು ತಾವು ಹೇಳಿದ್ದೀರಿ. ಶ್ರಮಿಸುವುದರಲ್ಲಿ ನಮಗೆ ಏನಾದರೂ ಅನುಮಾನ ಇದೆಯೇ?

ಆದ್ದರಿಂದ ಬರೀ ಘೋಷಣೆಯಲ್ಲಿ ನಂಬಿಕೆ ಇಡಬೇಕಾಗಿಲ್ಲ. 5ನೇ ಅಧ್ಯಾಯದಲ್ಲಿ ಮತ್ತೊಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಡಳಿತಾತ್ಮಕ ಕ್ರಮದ ಸಾಮಾನ್ಯ ತತ್ವಗಳು. ಸರ್ಕಾರವು ಕಾನೂನು ಸಾಕ್ಷರತೆಯನ್ನು ಪ್ರವರ್ಧಿಸಲು ಆಡಳಿತಾತ್ಮಕ ಕ್ರಮದಲ್ಲಿಯ ವಿಳಂಬವನ್ನು ತಡೆಯುವ ಕ್ರಮ ಕೈಗೊಳ್ಳಲು, ಆಡಳಿತಾತ್ಮಕ ಕ್ರಮಕ್ಕೆ ಸಂಬಂಧಪಟ್ಟ ವಿವಾದದ ಬಗ್ಗೆ ನಿರ್ಧರಿಸುವಾಗ ಅಹವಾಲು ಕೇಳಿಕೊಳ್ಳಲು ಅವಕಾಶ ನೀಡಲು, ಸಂಬಂಧಪಟ್ಟ ವ್ಯಕ್ತಿಗಳಿಗೆ ತೀರ್ಮಾನಗಳನ್ನು ತಿಳಿಸುವ ಬಗ್ಗೆ ಖಚಿತಪಡಿಸಿಕೊಳ್ಳಲು ಕುಂದುಕೊರತೆಗಳ ನಿವಾರಣೆಗಾಗಿ ಶ್ರಮಿಸತಕ್ಕದ್ದು; ಇದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಆದರೆ ನೀವು ಹೇಳುವ ಸಿದ್ಧಾಂತವನ್ನು ಜಾರಿಗೆ ತರುವುದಕ್ಕೆ ಯಾವ ಕಾರ್ಯನೀತಿಯನ್ನು ನಾವು ಅನುಸರಿಸಬೇಕು? ಈ ರಾಜ್ಯದಲ್ಲಿರುವಂಥ ಆಡಳಿತ ವ್ಯವಸ್ಥೆಯಲ್ಲಿ ಏನು ಅಧಿಕಾರಿಗಳಿದ್ದಾರೆ, ಅವರಿಗೆ ಹಕ್ಕುಗಳನ್ನು ರಕ್ಷಣೆ ಮಾಡಬೇಕು. ಮತ್ತು ಅವರು ಸರಿಯಾಗಿ ಕೆಲಸಗಳನ್ನು ಮಾಡದೇ ಇದ್ದಾಗ ಅವರ ಹೊಣೆಗಾರಿಕೆಯನ್ನು ನಿರ್ಧಾರ ಮಾಡಬೇಕು. ಹೊಣೆಗಾರಿಕೆಯನ್ನು ನಿರ್ಧಾರ ಮಾಡಿ ಅವರ ಹಕ್ಕುಗಳನ್ನು ಸಹ ನಾವು ಮನ್ನಿಸಿ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ನಡೆದಾಗ ಅದನ್ನು ಸರಿಪಡಿಸುವುದಕ್ಕೆ ಬೇಕಾದ ಅಧಿಕಾರವನ್ನು ನಾವು ಕೊಡಬೇಕಾಗುತ್ತದೆ. ಈ ಎಲ್ಲಾ ದೃಷ್ಟಿಯಿಂದ ಇನ್ನೂ ವಿವರವಾಗಿ ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈಗ ಏನು ಈ ಕಾನೂನನ್ನು ಐತಿಹಾಸಿಕ ಕಾನೂನು ಎಂದು ಹೇಳಿದ್ದೀರಿ ಇದು ಐತಿಹಾಸಿಕ ಕಾನೂನಾಗಿಲ್ಲ. ರಾಷ್ಟ್ರದಲ್ಲಿ ಪ್ರಥಮವಾಗಿ ತಾವು ತಂದಿರಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಇದನ್ನು ಐತಿಹಾಸಿಕ ಕಾನೂನಾಗಿ ಮಾರ್ಪಡಿಸಬೇಕಾದರೆ ಬೇಕಾದ ಚಿಂತನೆಯ ಹಿನ್ನೆಲೆ ಏನಿದೆ, ಅದು ಇದರಲ್ಲಿ ಇಲ್ಲ. ಆದ್ದರಿಂದ ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೆ. ಎಲ್ಲ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಇದರಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದೀರಿ. ಆ ಕೆಲವು ವಿಚಾರಗಳ ಬಗ್ಗೆ ನನ್ನ ಭಿನ್ನಮತ ಇಲ್ಲ ಅಥವಾ ನಮ್ಮ ಪಕ್ಷದವರ ಭಿನ್ನಮತ ಇಲ್ಲವೆಂದು ನಾನು ಭಾವಿಸಿದ್ದೇನೆ. ಯಾವುದೇ ವಿರೋಧ ಪಕ್ಷದವರ ಭಿನ್ನಮತ ಇಲ್ಲ. ಈ ದೇಶದಲ್ಲಿ ದಕ್ಷತೆಯನ್ನು ಹೆಚ್ಚು ಮಾಡುವುದಕ್ಕೆ, ಭ್ರಷ್ಟಾಚಾರವನ್ನು ತಡೆಯಲಿಕ್ಕೆ ಯಾವುದೇ ಸರ್ಕಾರ ಬಂದರೂ ಕೂಡಾ ಯಾವ ಒಂದು ಕಾರ್ಯ ನೀತಿಯನ್ನು ನಿರ್ಧಾರ ಮಾಡುತ್ತಾರೆ, ಆ ನಿರ್ಧಾರ ಮಾಡಿದ ಕಾಲ ನೀತಿಯ ಆಧಾರದ ಮೇಲೆ ಜಾರಿಗೆ ತರುವುದಕ್ಕೆ ಪ್ರಮಾಣಿಕವಾದ ಪ್ರಯತ್ನವನ್ನು ಪಕ್ಷಾತೀತವಾಗಿ ಆಡಳಿತ ವ್ಯವಸ್ಥೆ ಮಾಡಬೇಕು ಎನ್ನುವ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ನಿಮ್ಮ ಕಾರ್ಯನೀತಿಯನ್ನು ನಾವು ವಿರೋಧ ಮಾಡಬಹುದು. ಅಥವಾ ನಮ್ಮ ಕಾರ್ಯ ನೀತಿಯನ್ನು ಎಂದರೆ ಪಾಲಿಸಿಯನ್ನು ನೀವು ವಿರೋಧ ಮಾಡಬಹುದು. Policy that is determined by the party,ಇರಲಿ; ನಾವಿಬ್ಬರೂ ಒಪ್ಪೋದಿಲ್ಲ; ಒಂದು ಪಕ್ಷದವರ ಕಾರ್ಯನೀತಿ ಬಗ್ಗೆ ಮತ್ತೊಂದು ಪಕ್ಷದವರ ಭಿನ್ನಮತ ಇದ್ದರೂ ಸಹ ನಾನು ತಮ್ಮಲ್ಲಿ ಕೇಳುವುದು ಇಷ್ಟೇ. ಅದು ಏನೇ ಇದ್ದರೂ ಸಹ ಅದನ್ನು ಜಾರಿ ಮಾಡುವಾಗ ನಾನ್ ಪೋಲಿಟಿಕಲ್ಲಾಗಿ ಅದನ್ನು ಜಾರಿ ಮಾಡುವ ಒಂದು ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ತರಬೇಕಾಗಿದೆ. ಅದಕ್ಕೆ ಬೇಕಾದ ಹೊಣೆಗಾರಿಕೆಯನ್ನು ನಿರ್ಧಾರ ಮಾಡಬೇಕಾಗಿದೆ. ಒಂದು ಪಕ್ಷ ಹೊಣೆಗಾರಿಕೆ ಇಲ್ಲದ ಸಂದರ್ಭದಲ್ಲಿ ಅವರಿಗೆ ಶಿಕ್ಷೆಯನ್ನು ಕೊಡಬೇಕಾಗಿದೆ. ಎಲ್ಲೆಲ್ಲಿ ಒಳ್ಳೆಯ

ಅಧಿಕಾರಿಗಳು ಇದ್ದಾರೆ, ಅವರಿಗೆ ಬಡ್ತಿ, ಪ್ರೋತ್ಸಾಹ ಕೊಡಬೇಕಾಗುತ್ತದೆ. ಇದೆಲ್ಲಕ್ಕಿಂದಲೂ ಹೆಚ್ಚಾಗಿ ಒಂದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಸುಮಾರು 6782 ಕೋಟಿ ರೂಪಾಯಿ ಆಯವ್ಯಯವನ್ನು ನಾವು ಒಪ್ಪಿದ್ದೇವೆ. ಅದರಲ್ಲಿ ಎಷ್ಟು ಹಣವನ್ನು ನಾವು ಆಡಳಿದ ವೆಚ್ಚವನ್ನಾಗಿ ಖರ್ಚು ಮಾಡುತ್ತೇವೆ? ನನಗೆ ತಿಳಿದಿರುವ ಪ್ರಕಾರ 1988ನೇ ಇಸವಿಯಲ್ಲಿನ ಆದಾಯದಲ್ಲಿ ಶೇಕಡಾ 47.5ರಷ್ಟು ಹಣವನ್ನು ನಾವು ಆಡಳಿತಕ್ಕೆ ಖರ್ಚು ಮಾಡಿದ್ದೇವೆ. ಇದರ ಬಗ್ಗೆ ನಾವು ಒಂದು ಮಿತಿಯನ್ನು ಹಾಕಬೇಕು. ನಮಗೆ ಬೇಕಾದ ಅಧಿಕಾರಿಗಳು ಇದ್ದರೆ ಅವರಿಗೆ ಬೇಕಾದ ಬಡ್ತಿ ಅವಕಾಶ ಮಾಡುವುದಕ್ಕೆ ಸ್ಥಾನ ನಿರ್ಮಾಣ ಮಾಡುವ ಪ್ರವೃತ್ತಿ ಬೆಳೆದು ಬಂದಿದೆ. ಇದು ನಿಮ್ಮ ಸರ್ಕಾರದಲ್ಲಿ ಇದ್ದಿಲ್ಲವೇ ಒಂದು ಕೇಳಬೇಡಿ. ಈ ಅಪಾದನೆ ಹಿಂದಿನ ಸರ್ಕಾರದಲ್ಲೂ ಇತ್ತು. ಈಗಿನ ಸರ್ಕಾರದಲ್ಲೂ ಇದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಪ್ರವೃತ್ತಿಯನ್ನು ನಾವೆಲ್ಲರೂ ತಡೆಯದೇ ಇದ್ದರೆ ಆಡಳಿತಾತ್ಮಕ ಖರ್ಚು ಮಿತಿಮೀರಿ ಬೆಳೆಯುತ್ತದೆಂದು ಹೇಳುತ್ತೇನೆ. ಅದೇ ರೀತಿ ವ್ಯಕ್ತಿಗಳ ಆಧಾರದ ಮೇಲೆ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳದೇ ಇಡೀ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಈ ಆಡಳಿತ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡುವುದಕ್ಕೆ ಹೊಣೆಗಾರಿಕೆ, ಜವಾಬ್ದಾರಿಯಿಂದ ಕೆಲಸ ಮಾಡುವ ಪ್ರವೃತ್ತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ವಿಧೇಯಕವನ್ನು ನೋಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಯಮ 83ರ ಪ್ರಕಾರ ತಾವು ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಏನು ಪ್ರಸ್ತಾಪ ಇಟ್ಟಿದ್ದೀರಿ ಅದಕ್ಕೆ ನಾವು ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇವೆ. ತಾವು ಆ ತಿದ್ದುಪಡಿ ಒಪ್ಪುವುದಾದರೆ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ, ಈ ಹಿನ್ನೆಲೆಯಲ್ಲಿ ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಬೇಕು. ಕಳುಹಿಸಿದ ಸಂದರ್ಭದಲ್ಲಿ ಅಲ್ಲಿ ಹೆಚ್ಚು ವಿವರವಾಗಿ ಇದನ್ನೆಲ್ಲಾ ಪರಿಶೀಲಿಸುವ ಅಗತ್ಯ ಇದೆ, ಅವಶ್ಯಕತೆ ಇದೆ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷಿಣಿಯವರೇ, ಈ ವಿಚಾರದಲ್ಲಿ ನಾನು ಮಾತನಾಡುವುದಕ್ಕೆ ಬಹಳ ಇದೆ. ಆಡಳಿತಾತ್ಮಕ ಒಂದು ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕಾಗಿರತಕ್ಕದ್ದನ್ನು ನಾವೆಲ್ಲರೂ ಒಪ್ಪುತ್ತೇವೆ. ಇವರು ಮುಖ್ಯಮಂತ್ರಿಗಳಾದ ತಕ್ಷಣ ಆಡಳಿತ ಹದಗೆಟ್ಟಿತು ಎಂದು ನಾನಂತೂ ಒಪ್ಪುವುದಿಲ್ಲ. ಕಳೆದ 40 ವರ್ಷಗಳ ಕಾಲದಲ್ಲಿ ನಮ್ಮ ಒಂದು ವ್ಯವಸ್ಥೆಯಲ್ಲಿ ಜಾತೀಯತೆ, ಗುಂಪು, ಧಾರ್ಮಿಕ ಮನೋಭಾವನೆಗಳನ್ನು ಬೆಳೆಸುವುದಕ್ಕೆ ಪ್ರಚೋದನೆ ಕೊಡತಕ್ಕ ಶಕ್ತಿಗಳು, ಲಂಚ ಪಡೆಯತಕ್ಕದ್ದು, ಜನರನ್ನು ತಿರಸ್ಕಾರದಿಂದ ನೋಡುವುದು-ಇವೆಲ್ಲಾ ನಮ್ಮ ವ್ಯವಸ್ಥೆಯಲ್ಲಿ ಬೆಳೆದುಕೊಂಡು ಬಂದಿದೆ. ಇದು ಬದಲಾವಣೆ ಆಗಬೇಕು. ಸಮಯದ ಅಭಾವದಿಂದ ನನಗೆ ಮಾತನಾಡುವುದಕ್ಕೆ ಆಗುತ್ತಾ ಇಲ್ಲ, ಆದರೆ ಒಂದನ್ನು ಗಹನವಾಗಿ ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ಪಕ್ಷಾತೀತವಾಗಿ ನಾವು ವಿಚಾರ ಮಾಡಬೇಕಾಗಿದೆ. ನಮ್ಮ ಸರ್ಕಾರದ ವ್ಯವಸ್ಥೆಯಲ್ಲಿ ಒಂದು ಸಾರಿ ಕೆಲಸಕ್ಕೆ ಸೇರಿದ ತಕ್ಷಣವೇ.... ನಾವು ಪ್ರತಿ ಸಾರಿ 5 ವರ್ಷಕ್ಕೆ ಜನರ ಮುಂದೆ ಹೋಗುತ್ತೇವೆ. ಈಗ ಅನೇಕ ಜನರು ಹೇಳುತ್ತಾರೆ. ಶಾಸಕರು ಕೇಳಿದಹಾಗೆ ಅಥವಾ ಮಂತ್ರಿಗಳು ಹೇಳಿದಹಾಗೆ ಅಧಿಕಾರಿಗಳು ಬದಲಾವಣೆ ಆಗಬಾರದು ಎಂದು ಹೇಳಿ.

ಬದಲಾವಣೆ ಆಗಬೇಕು ಎಂದು ನಾನು ಹೇಳುತ್ತೇನೆ. ಏಕೆ ಆಗಬಾರದು? ಇವತ್ತು ನಾನು ಹೇಳುತ್ತೇನೆ. ನಾನು ಮಂತ್ರಿಯಾಗಿದ್ದಾಗ ನಾನು ಕರೆದ ಕಡೆಗೆ ಎಲ್ಲಾ ಅಧಿಕಾರಿಗಳು ಬರಬೇಕೆಂದು ಹೇಳುತ್ತಾ ಇದ್ದೆ. ಬೆಳಗಿನ ಜಾವ 2 ಗಂಟೆಯಾಗಿರಲಿ ಕಾದು ಕುಳಿತಿರಬೇಕೆಂದು ಸೂಚನೆಯನ್ನು ನಾನು ಕೊಡುತ್ತಿದ್ದೆ. ಏಕೆ ಕೊಡುತ್ತಿದ್ದೆ ಅಂದರೆ ಕೆಲವು ಸಂದರ್ಭಗಳಲ್ಲಿ ಅವಶ್ಯಕತೆ ಇರುತ್ತದೆ. ಒಂದು ಸಮಾಜವನ್ನು ಬದಲಾವಣೆ ಮಾಡಬೇಕು, ಬಡವರನ್ನು ಮೇಲಕ್ಕೆ ಎತ್ತಬೇಕು ಎನ್ನುವ ವಿಚಾರವನ್ನು ಇಟ್ಟುಕೊಂಡು ಈ ಸಮಾಜದಲ್ಲಿ ಬದಲಾವಣೆ ತರಬೇಕೆಂದು ಹೇಳಿದಾಗ ಆ ತತ್ವಕ್ಕೆ ಅನುಗುಣವಾಗಿರತಕ್ಕ ಅಧಿಕಾರಿಗಳಿಗೆ ಆ ಸ್ಥಾನವನ್ನು ನಾವು ಕೊಡಬೇಕಾಗುತ್ತದೆ. ಅದು ಬಹಳ ಅವಶ್ಯಕ. ಈ ದೇಶದಲ್ಲಿ ಸಾಮಾಜಿಕ ವ್ಯವಸ್ಥೆ ಬದಲಾವಣೆ ಮಾಡಬೇಕಾದರೆ ಇವತ್ತು ಅಧಿಕಾರಶಾಹಿಯಲ್ಲೂ ಸಹಿತಾ ಎಲ್ಲಾ ವರ್ಗದ ಜನರಿಗೆ ನಾವು ಸ್ಥಾನಮಾನಗಳನ್ನು ಕೊಡಬೇಕಾಗುತ್ತದೆ.

ಯಾರು ಕೆಳವರ್ಗದ ಜನರು ಇರುತ್ತಾರೆ ಅವರನ್ನು ಮೇಲ್ಗಡೆ ತರುವುದಕ್ಕೆ ಅಥವಾ ಈ ದೇಶದ ಜಾತ್ಯಾತೀತ ಸಮುದಾಯಕ್ಕೆ ಯಾವು ಒಳಗಾಗಿದ್ದಾರೆ. ಅಂತಹವರಿಗಾಗಿ ಈ ರಾಷ್ಟ್ರವನ್ನು ಯಾವರೀತಯಲ್ಲಿ ಕಟ್ಟಬೇಕು ಯಾವ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು ಎಂದು ಯೋಚನೆ ಮಾಡತಕ್ಕವರಿಗೆ ನಾವು ಅಧಿಕಾರವನ್ನು ಕೊಡಬೇಕಾಗುತ್ತದೆ. ಆ ದೃಷ್ಟಿಯಲ್ಲಿ ಅಧಿಕಾರ ಕೊಡುವುದಾದಲೆ ಯಾವುದೇ ತಪ್ಪಿಲ್ಲ ಅದನ್ನು ನಾವು ಹೇಳಬೇಕಾಗುತ್ತದೆ, ಹೇಳುವುದರಲ್ಲಿ ಏನೂ ತಪ್ಪಿಲ್ಲ ಯಾವುದೇ ಹೆಡ್‌ಆಫ್ ದಿ ಡಿಪಾರ್ಟ್‌ಮೆಂಟ್ ಹೇಳಿದ ಹಾಗೆ ಎಲ್ಲಾ ವರ್ಗಾವಣೆ ಆಗಬೇಕೇ? ಆದರೆ ಇಂತಹ ವರ್ಗಾವಣೆಯನ್ನು ಮಾಡತಕ್ಕ ಸಂದರ್ಭದಲ್ಲಿ ಏನೋ ಉದ್ದೇಶವನ್ನಿಟ್ಟುಕೊಂಡು ಮಾಡಿರುತ್ತಾರೆಂದರೆ ಅದು ತಪ್ಪಾಗುತ್ತದೆ. ಅಧಿಕಾರಿಗಳ ಒಂದು ಸಾರಿ ಸರ್ಕಾರಿ ಸೇವೆಗೆ ಸೇರಿದರೆ 30ವರ್ಷಗಳ ಕಾಲ ಯಾರೂ ಸಹ ಅವರನ್ನು ಹೇಳುವವರು ಕೇಳುವವರು ಯರೂ ಇರುವುದಿಲ್ಲ ನಾವು ಪ್ರತಿ ಐದು ವರ್ಷಗಳಿಗೊಮ್ಮೆ ಜನಗಳ ಹತ್ತಿರ ಹೋಗುತ್ತೇವೆ. ಭಾರತೀಯ ಜನತಾ ಪಾರ್ಟಿ ಯವರು ಅವರು ಅವರ ವಿಚಾರ ಹೇಳುತ್ತಾರೆ. ಮುಸ್ಲಿಂಲೀಗ್‌ನವರು ಅವರ ವಿಚಾರ ಅವರು ಹೇಳುತ್ತಾರೆ. ನಮ್ಮ ವಿಚಾರ ನಾವು ಹೇಳುತ್ತೇವೆ. ನಾವು ಜನಗಳ ಹತ್ತಿರ ಪರೀಕ್ಷೆಗೆ ಒಳಪಡುತ್ತೇವೆ. ಮತ್ತೆ ಇಲ್ಲಿಗೆ ಬರುತ್ತೇವೆ. ನಾವೇನು ಜನಗಳಿಗೆ ಆಶ್ವಾಸನೆಯನ್ನು ಕೊಟ್ಟಿರುತ್ತೇವೆ ಅದನ್ನು ಕಾರ್ಯಗತ ಮಾಡುವುದಕ್ಕೆ ಈ ಒಂದು ಯಂತ್ರವನ್ನು ನಾವು ಉಪಯೋಗಿಸುತ್ತೇವೆ. ಇಂದು ಯಾರೇ ಅಧಿಕಾರಕ್ಕೆ ಬಂದರೂ ಸಹಿತ ಇವತ್ತು ಏನಾಗಿದೇ? ವೀರೇಂದ್ರಪಾಟೀಲ್‌ರವರು ಮುಖ್ಯಮಂತ್ರಿಗಳಾಗಿ ಹೇಳಿದ ಮಾತು ಇದೆನೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿ ಹೇಳಿದ ಮಾತು ಇದೆನೆ. ಅಧಿಕಾರವಿದ್ದಂತಹ ಸಂದರ್ಭದಲ್ಲಿ ನಾವೇನು ವಿಚಾರಗಳನ್ನು ಇಟ್ಟುಕೊಂಡಿರುತ್ತೇವೆ ಅದನ್ನು ಕಾರ್ಯಗತ ಮಾಡುವುದಕ್ಕೆ ಆಡಳಿತ ಯಂತ್ರವನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವುದು ಅನೇಕ ಸಂದರ್ಭಗಳಲ್ಲಿ ನಮಗೆಲ್ಲರಿಗೂ ಅನ್ನಿಸಿದೆ. ಆ ದೃಷ್ಟಿಯಿಂದ ಸರ್ಕಾರ ಈ ಒಂದು ವಿಧೇಯಕವನ್ನು ಮಂಡಿಸಿದೆ. ಅದನ್ನು ನಾನು ಪರಿಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಆದರೆ ತಮಗೆ ನಾನು ಏನು ಮನವಿಯನ್ನು ಮಾಡಿಕೊಳ್ಳುತ್ತೇನೆಂದರೆ ಇದು ತಕ್ಷಣ ಆಗಬೇಕು. ಇದನ್ನು ಜಾಯಿಂಟ್ ಸಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ಈ ವಿಧೇಯಕ ಜಾರಿಗೆ ಬಂದಮೇಲೆ ನಾವೇನು ಈ

ವಿಧೇಯಕವನ್ನು ಪಾಸ್ ಮಾಡುತ್ತೇವೆ ಅದನ್ನು ಕಾರ್ಯಾಚರಣೆಯಲ್ಲಿ ಲಾಗು ಮಾಡಿ. ಇಲ್ಲದಿದ್ದರೆ ಇದಕ್ಕೆ ಬೇರೆ ಅರ್ಥ ಬರುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸುತ್ತಾರೆಂದು ತಿಳಿದು ಸರ್ಕಾರ ನಮ್ಮ ಸಲಹೆಯನ್ನು ಒಪ್ಪಿರುವುದರಿಂದ ನನ್ನ ಮಾತನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷಿಣಿಯವರೆ ಮಾನ್ಯ ವಿರೋಧಪಕ್ಷದ ನಾಯಕರು ವಿರೋಧಪಕ್ಷದ ಉಪನಾಯಕರು ಉಳಿದಿರತಕ್ಕ ಮಿತ್ರರು ಕೊಟ್ಟಿರತಕ್ಕ ಸಲಹೆಗಳು ಬಹಳ ಉಪಯುಕ್ತವೆಂದು ನಾನು ಭಾವಿಸಿದ್ದೇನೆ. ಆಡಳಿತದ ಬಗ್ಗೆ ವಿವರಗಳನ್ನು ಇಟ್ಟು ಮಾತನಾಡತಕ್ಕಕ ಸಂದರ್ಭದಲ್ಲಿ ವ್ಯಾಖ್ಯಾನಗಳು ಪುಂಖಾನುಪುಂಖಾವಾಗಿ ಹೊರಘೊಮ್ಮಿ ಬರತಕ್ಕ ಸಂದರ್ಭಗಳಿವೆ. ನಾನು ಈ ಮಾತನ್ನು ಆಡಬೇಕಾದರೆ ಪೂರ್ವ ಪೀಠಿಕೆಯಾಗಿ ನಾನು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಡಳಿತ ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ಸಂಬಂಧಪಟ್ಟಿರತಕ್ಕ ವಿಚಾರ ನಾವು ನಮ್ಮ ಅಧೀಕಾರ ವ್ಯಾಪ್ತಿಯಲ್ಲಿ ಬರತಕ್ಕ ವಿಚಾರಗಳ ಬಗ್ಗೆ ಮಾತ್ರ ಸೀಮಿತಗೊಳಿಸಿ ಹೇಳುವ ಒಂದು ಪ್ರಯತ್ನವನ್ನು ಮಾಡುತ್ತೇನೆ. ಈಗ ಐ.ಎ.ಎಸ್. ಕೇಡರ್ ಇದೆ. ಅವರು ಹಲವಾರು ವಿಚಾರಗಳಲ್ಲಿ ಕೇಂದ್ರಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿದ್ದಾರೆ ಇವತ್ತು ಆಯಾ ರಾಜ್ಯಗಳಿಗೆ ಇವರು ಹಂಚಿಕೆಯಾಗಿ ಹೋಗಿರತಕ್ಕ ಸಂದರ್ಭದಲ್ಲಿ ರಾಜ್ಯಸರ್ಕಾರದ ಕೆಲವು ಇತಿಮಿತಿಯೊಳಗೆ ಅವರು ಬರುತ್ತಾರೆ. ಇಲ್ಲಿ ಕೆಲವು ವಿಚಾರಗಳ ಬಗ್ಗೆ ಸಂಪೂರ್ಣವಾಗಿ ಅಧೀಕಾರ ಹೊಂದಿಲ್ಲದ ಸಂದರ್ಭದಲ್ಲಿ ಕೆಲವು ವಿಚಾರಗಳಲ್ಲಿ ಅಧಿಕಾರವನ್ನು ಚಲಾವಣೆ ಮಾಡತಕ್ಕದ್ದು ಅಷ್ಟೇ ಕಷ್ಟವಾಗಿದೆ. ಅದಕ್ಕೆ ಉದಾಹರಣೆಯನ್ನು ಐ.ಎ.ಎಸ್. ಕೊಟ್ಟಿದ್ದೇನೆ. ಆದರೆ ಇವತ್ತು ನಮಲ್ಲಿರತಕ್ಕ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ತಾವು ಹೇಳಿದಹಾಗೆ ಅಕ್ಷರಜ್ಞಾನದ ಸರಾಸರಿ ಹಿನ್ನೆಲೆಯಲ್ಲಿ ವಿದ್ಯೆ ಎಷ್ಟು ಪ್ರಮಾಣದಲ್ಲಿ ಸಾಮಾನ್ಯ ಜನರಿಗೆ ಇದೆ ಎನ್ನುವ ಹಿನ್ನೆಲೆಯಲ್ಲಿ ನಾವು ಆಡಳಿತವನ್ನು ಬೇರೆ ರೂಪದಲ್ಲಿ ನಾವು ಜಾರಿಗೆ ತರದಿದ್ದರೆ ಈಗಿರತಕ್ಕ ಆಡಳಿತವನ್ನು ನಾವು ಇಷ್ಟು ವರ್ಷಗಳವರೆಗೆ ನಾವು ನೋಡಿಯಾದ ಮೇಲೆ ಬದಲಾವಣೆಯನ್ನು ಆಮೂಲಾಗ್ರವಾಗಿ ಮಾಡಿದಿದ್ದರೆ ಈಗಿರತಕ್ಕ ಸಮಗ್ರ ಬೃಹದಾಕಾರವಾಗಿ ಏನು ಬೆಳೆದಿದೆ ಜನಸಾಮಾನ್ಯರಿಗೆ ಸಂಪೂರ್ಣವಾಗಿ ವಿರೋಧವಾಗಿ ಹೋಗಿದೆ ಎನ್ನತಕ್ಕ ಭಾವನೆ ಏನು ಬೆಳೆದಿದೆ. ಅದನ್ನು ಸರಿಪಡಿಸುವ ಬಗ್ಗೆ ಬರಲಿಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ನಾವಾದರೂ ಒಂದು ಪ್ರಯೋಗ ಮಾಡುತ್ತೇವೆ. ಇವತ್ತು ಪ್ರಯೋಗ ಎನ್ನತಕ್ಕ ವಿಚಾರವನ್ನು ನಾನು ಅದಕ್ಕೆ ಹೇಳಿದ್ದೇನೆ. ಈವೊಂದು ಪ್ರಯೋಗವೆಂದು ಹೇಳಿ ಆದರಿಂದ ಒಳ್ಳೆಯ ಫಲಿತಾಂಶ ಬರುತ್ತದೆಯೇ ಎನ್ನುವ ಅನುಮಾನ ಬಂದಿದೆ. ಒಳ್ಳೆಯ ಫಲಿತಾಂಶ ಬರುತ್ತದೆನ್ನುವ ದೃಷ್ಟಿಯನ್ನಿಟ್ಟು ನಾವು ಪ್ರಯೋಗ ಮಾಡುವುದಕ್ಕೆ ಹೊರಟಿದ್ದೇವೆ. ತಮಗೆಲ್ಲ ಗೊತ್ತಿದೆ, ಹಿಂದೆ ಡಿಪಾರ್ಟ್‌ಮೆಂಟಲ್ ಎನ್‌ಕ್ವಾಯರಿ ಮತ್ತೊಂದು ಮಾಡತಕ್ಕದ್ದು ಇದೆ. ಪ್ರಿವೆನ್ಸ್‌ಸ್ ಆಫ್ ಕರಪ್ಷನ್ ಆಕ್ಟ್ ಇದೆ. ಮೊದಲು ವಿಜಿಲೆನ್ಸ್ ಇತ್ತು. ಈಗ ಲೋಕಾಯುಕ್ತವನ್ನು ಇಟ್ಟುಕೊಂಡಿದ್ದೇವೆ. ನಾಳೆ ಮತ್ತೊಂದು ಯಾವುದಾದರೂ ಕಾನೂನು ಬಂದುಬಿಡಬಹುದು. ಇದೆಲ್ಲವೂ ಕೂಡಾ ನಾವು ನಮ್ಮ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಮಾಡತಕ್ಕಂಥ ಪ್ರಯೋಗಗಳು. ಈ ಪ್ರಯೋಗಗಳಲ್ಲಿ ಫಲಿತಾಂಶ ಕೆಲವೊಮ್ಮೆ ಒಳ್ಳೆಯದಾಗಿ ಬಂದರೂ ಕೂಡಾ, ಫಲಿತಾಂಶ ಅಷ್ಟೊಂದು ಒಳ್ಳೆಯದಾಗಿ

ಬಂದಿಲ್ಲವೆಂದು ಅಭಿಪ್ರಾಯ ಪದೇಪದೇ ಕೇಳಿ ಬರುತ್ತಿದೆ. ಇವತ್ತು ನಾವು ಇಲ್ಲಿ ಯಾವ ವಿಚಾರ ಇಟ್ಟಿದ್ದೇವೆ? ಈ ಪಂಚಸೂತ್ರಗಳ ಎಂಬ ಮಾತನ್ನು ನಾನು ಆಡಿದಾಗ, ಈಗ ನಾನು ಹೇಳಿದ್ದು ಬಹಳ ದೊಡ್ಡ ವಿಚಾರ. ಅದರ ಬಗ್ಗೆ ಮಾತನಾಡುವುದಕ್ಕೆ ಗಂಟೆಗಟ್ಟಲೆ ಕಾಲ ಬೇಕಾಗುತ್ತದೆ. ನಿಮಗೂ ಕೂಡಾ ಸಾಧ್ಯವಾಗುವುದಿಲ್ಲ. ಇವತ್ತು ನಾವು ಇಟ್ಟಿರತಕ್ಕಂಥಾದ್ದು, ಅಂದರೆ, ಇವತ್ತು ಏನು ಅಧಿಕಾರಿಗಳು ಇದ್ದಾರೆ, ಇದಕ್ಕೆ ಸಂಬಂಧ ಇದ್ದರೂ ಕೂಡಾ, ಇವತ್ತು ಈ ಪ್ರಯೋಗ ಮಾಡದೇನೇ ಸುಮ್ಮನೆ ಬಿಟ್ಟರೆ ನಾವು ನೋಡಿ ನೋಡಿ ಸುಮ್ಮನೆ ಬಿಟ್ಟಹಾಗೆ ಆಗುತ್ತದೆ. ಆ ಒಂದು ದೃಷ್ಟಿಯಿಂದ ಸದುದ್ದೇಶದಿಂದ ನಾವು ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡತಕ್ಕಂಥಾದ್ದು, ಅಕೌಂಟಬಿಲಿಟಿಯನ್ನು ಫಿಕ್ಸ್ ಮಾಡತಕ್ಕಂಥಾದ್ದು, ಪ್ರೊಸಿಜರ್ಸ್ ಸಿಂಪ್ಲಿಫೈ ಮಾಡತಕ್ಕದ್ದು, ಡೆಲಿಗೇಶನ್ಸ್ ಆಫ್ ಪವರ್ಸ್, ಇದೆಲ್ಲವೂ ಕೂಡ ಜನಸಾಮಾನ್ಯರಿಗೆ ಅನುಕೂಲ ಆಗುತ್ತದೆ, ಆಡಳಿತದಲ್ಲಿ ವಿಷಯಗಳು ಇತ್ಯರ್ಥ ಕಾಣುವುದಕ್ಕೆ ಕಡಿಮೆ ಕಾಲ ಕೊಟ್ಟು ಜನರಿಗೆ ನಾವು ನೇರವಾಗಿ ಅದರ ಫಲಿತಾಂಶರನ್ನು ಕೊಡುವುದಕ್ಕೆ ಸಾಧ್ಯವಾಗಬಹುದು ಎನ್ನುವ ಅನಿಸಿಕೆಯ ಹಿನ್ನೆಲೆಯಲ್ಲಿ ಈ ಒಂದು ಆಡಳಿತ ಪ್ರಕ್ರಿಯೆ ಮಸೂದೆಯನ್ನು ಸದುದ್ದೇಶದಿಂದ ಈ ಸದನದ ಮುಂದೆ ತಂದಿರತಕ್ಕದ್ದು. ಇವರು ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರೂ ಕೂಡಾ ಹೇಳಿದ ಕೆಲವು ಮಾತುಗಳ ಬಗ್ಗೆ ನಾನು ಸರಿಯಲ್ಲವೆಂಬ ಮಾತನ್ನು ನಾನು ಆಡುತ್ತಿಲ್ಲ. ಶ್ರೀ ಯಡಿಯೂರಪ್ಪನವರು ಕೂಡ ಹೇಳಿರತಕ್ಕ ಅನೇಕ ವಿಚಾರಗಳು ಇವೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಅಧಿಕಾರಿಗಳ ದೃಷ್ಟಿಯಿಂದ ಸಮಸ್ಯೆಗಳು ಅವರಿಗೇ ಇದ್ದರೆ, ಇನ್ನು ಜನಸಾಮಾನ್ಯರಿಗೆ ಇನ್ನು ಎಷ್ಟು ತೊಂದರೆ ಇರಬಹುದು ಎಂಬುದನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಮಾನ್ಯ ಉಪನಾಯಕರಾದ ಶ್ರೀ ಸಿಂಧ್ಯರವರು ಹೇಳಿರತಕ್ಕ ಮಾತು ಇವತ್ತು ಬಡ ಜನರ ದೃಷ್ಟಿಯಿಂದ ವಿಚಾರ ಮಾಡಿಮಾಡಿ ಹೆಜ್ಜೆ ಇಡಬೇಕಾದ ಸಂದರ್ಭ ಇಲ್ಲಿಗೆ ಎನ್ನತಕ್ಕದ್ದು. ಈ ಅಭಿಪ್ರಾಯವನ್ನು ನಾವು ಮೂಲಭೂತವಾಗಿ, ಅನಿವಾರ್ಯವಾಗಿ ಎಲ್ಲರೂ ಒಪ್ಪಲೇಬೇಕು ಎನ್ನತಕ್ಕಂಥ ಪ್ರಶ್ನೆ ಅಲ್ಲ, ಈ ದಿಸೆಯತ್ತ ನಾವು ಹೆಜ್ಜೆ ಇಡುತ್ತಿದ್ದೇವೆ. ಈ ಒಂದು ಚಿಂತನೆ, ಈ ದಿಸೆಯಲ್ಲಿ ಇದು ಒಂದು ಪ್ರಯೋಗ. ಈ ಒಂದು ಪ್ರಯೋಗವನ್ನು ಮಾಡಿದರೆ, ಈ ಕಾನೂನನ್ನು ತಂದರೆ ಜನರಿಗೆ ಅನುಕೂಲವಾಗಬಹುದು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಆಡಳಿತದಲ್ಲಿ ಸಾಕಷ್ಟು ದೃಷ್ಟಿಯಿಂದ ಅದು ಪಾಸಿಟಿವ್ ಸೈಡ್‌ನಲ್ಲಿ ಬೆಳವಣಿಗೆ ಆಗಬಹುದು ಎನ್ನತಕ್ಕಂಥ ಆಸೆ ಇಟ್ಟುಕೊಂಡು ಸರ್ಕಾರ ವಿಚಾರ ಮಾಡಿ ನಾವು ರಾಜ್ಯಪಾಲರ ಭಾಷಣದಲ್ಲೇ ಈ ವಿಷಯ ಪ್ರಸ್ತಾಪ ಮಾಡಿದ್ದೆವು. ನಾವು ಹಾಗೆ ಹೇಳಿದ ಮೇಲೆ ಅದಕ್ಕೆ ನಡವಳಿಕೆಗಳನ್ನು ಕೂಡ ಇಟ್ಟುಕೊಳ್ಳಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಮಸೂದೆಯನ್ನು ಕೂಡ ನಾವು ಈಗ ಈ ಸಭೆಯನ್ನು ಇಟ್ಟಿದ್ದೇವೆ. ತಾವು ಸಲಹೆ ಮಾಡಿದ್ದೀರಿ. ನಾವು ಕೂಡ ಒಪ್ಪಿಕೊಂಡಿದ್ದೇವೆ. ಏಕೆಂದರೆ ನಾವು ಮಾಡುವುದು ಸಂಪೂರ್ಣವಾಗಿ ಅಪಾರಮಸ್ತಕವಾಗಿ ಎಟು ಜಡ್ ಕರೆಕ್ಟ್ ಆಗಿದೆ ಎನ್ನತಕ್ಕ ವಿಚಾರ ಅಲ್ಲ. ಕೆಲವೊಂದು ಸಾರಿ ಕೆಲವು ಕಲಮುಗಳ ಬಗ್ಗೆ ನಮಗೆ ಅನುಮಾನ ಬಂದರೂ ಕೂಡಾ ಇದೇ ಒಳ್ಳೆಯದೇನೋ ಎನ್ನತಕ್ಕಂಥ ಭಾವನೆಯಿಂದ ನಾವು ಇಟ್ಟಿದ್ದೇವೆ. ಮುಂದೆ ಇದು ಜಂಟಿ ಸಲಹಾ

ಸಮಿತಿಗೆ ಹೋಗಲಿ. ಸರ್ಕಾರಕ್ಕೆ ಇದರ ಬಗ್ಗೆ ಯಾವ ಆಕ್ಷೇಪಣೆಯೂ ಇಲ್ಲ. ಅದು ಹೋದ ಮೇಲೆ ಆಡಳಿತ ದೃಷ್ಟಿಯಿಂದ ಇನ್ನೂ ಅನೇಕ ತಿದ್ದುಪಡಿಗಳನ್ನು ಸಲಹೆಗಳನ್ನು ಮಾಡಬಹುದು. ಅವರುಮಾಡಲಿ ಮಾಡಿದ ಮೇಲೆ ಆ ಸಲಹೆಗಳನ್ನು ಕೂಡ ಒಳಗೊಂಡಿರತಕ್ಕಂಥ ಹಲವಾರು ವಿಚಾರಗಳನ್ನು ಒಳಗೊಂಡಿರತಕ್ಕಂಥ ಈ ಒಂದು ಮಸೂದೆಯನ್ನು ನಾವು ಸದನದಲ್ಲಿ ಇಟ್ಟು ವಿವರವಾಗಿ ಚರ್ಚೆ ಮಾಡೋಣ ಅನಂತರ ಸದನದಲ್ಲಿ ಒಪ್ಪಿಗೆ ಪಡೆದುಕೊಳ್ಳೋಣ ಎಂಬ ಒಟ್ಟಾರೆ ಅಭಿಪ್ರಾಯವನ್ನು ಸರ್ಕಾರ ಒಪ್ಪುತ್ತದೆ. ಅದಕ್ಕೆ ಅನುಗುಣವಾಗಿ ನಾವು ಕೂಡ ಈ ಒಂದು ಸಲಹೆಯನ್ನು ಸ್ವೀಕಾರ ಮಾಡಿದ್ದೇವೆ. ನಾನು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಿ ತಾವು ಪ್ರಸ್ತಾಪ ಮಾಡಿದ ಕೆಲವು ವಿವರಗಳಿಗೆ ನಾನು ಹೋಗುವುದಿಲ್ಲ ಹೇಗಿದ್ದರೂ ಇದು ಮತ್ತೆ ಬರಲೇಬೇಕು. ಮುಂದಿನ ಅಧಿವೇಶನದ ಒಳಗಡೆ ಜಂಟಿ ಸಲಹಾ ಸಮಿತಿಯ ಶಿಫಾರಸ್ಸುಗಳ ಜೊತೆಗೆ ಈ ಒಂದು ತಿದ್ದುಪಡಿ ಮಸೂದೆ ತಿರುಗಿ ಬಂದುಬಿಟ್ಟರೆ ನಮಗೆ ಉಪಯುಕ್ತವಾಗುತ್ತದೆ. ಕೊನೆಯಪಕ್ಷ ಮುಂದಿನ ಅಧಿವೇಶನದಲ್ಲಿ ನಾವು ಅದನ್ನು ಪಾಸ್ ಮಾಡಿ ಜಾರಿಗೆ ಕೊಡುವುದಕ್ಕೆ ಅನುಕೂಲವಾಗುತ್ತದೆ. ಏಕೆಂದರೆ ಜನಸಾಮಾನ್ಯರಿಗೆ ನಾವು ಏನಾದರೂ ಮಾಡಿ ಕೆಲವು ಅನುಕೂಲಗಳನ್ನು ಸರ್ಕಾರದಿಂದ ಕೊಡಲೇಬೇಕು. ಅದಷ್ಟು ಆಡಳಿತದಲ್ಲಿ ಬೇರೆ ರೂಪವನ್ನು ಕೊಡುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ ಕೆಲವು ವಿಚಾರದಲ್ಲಿ ಬಹಳ ಉಪಯುಕ್ತವಾದ ಚಿಂತನೆ ಇದರಲ್ಲಿವೆ. ಇದರ ಜೊತೆಗೆ ಕೆಲವು ಒಳ್ಳೆಯ ಅಧೀಕಾರಿಗಳಿದ್ದಾರೆ ಅವರ ಸಲಹೆಯನ್ನೂ ಪಡೆಯಿರಿ ಎಂಬ ಮಾತನ್ನು ತಾವು ಹೇಳಿದ್ದೀರಿ. ನಾವು ಆ ರೀತಿಯಾದ ಸಲಹೆಗಳನ್ನು ಪಡೆಯುವುದಕ್ಕೆ ಸಿದ್ಧರಿದ್ದೇವೆ. ಮಾನ್ಯ ಕೆಂಗಲ್ ಹನುಮಂತಯ್ಯನವರ ವಿಚಾರದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಅದು ನಿಜ ಆ ಕಾಲದಲ್ಲಿ ಇದ್ದಂಥ ಆಡಳಿತಕ್ಕೂ ಈಗಿರತಕ್ಕ ಆಡಳಿತಕ್ಕೂ ಸಮುದ್ರದಷ್ಟು ಅಗಲ ವ್ಯತ್ಯಾಸವನ್ನು ನಾವು ಈಗಾಗಲೇ ಕಂಡಿದ್ದೇವೆ. ಅದಕ್ಕೆ ಹಲವಾರು ಕಾರಣಗಳು ಇವೆ. ಇವತ್ತು ಶಾಸಕರ ಪಾತ್ರ ಏನು ಎಂಬ ಬಗ್ಗೆ ತಾವು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದ್ದೀರಿ. ಕೆಲವೊಮ್ಮೆ ಅದು ಜಾಸ್ತಿ ಹೋಯಿತೋ ಏನೋ ಎನ್ನುವ ಭಾವನೆ ಬಂದರೂ ಕೂಡ ಕೆಲವೊಮ್ಮೆ ಹಾಗೆ ಹೋಗದೇ ಇದ್ದರೆ ನ್ಯಾಯ ಸಿಕ್ಕುವುದಿಲ್ಲ ಎಂಬ ಭಾವನೆಯೂ ಕೂಡ ಕೆಲವೊಮ್ಮೆ ಬರತಕ್ಕಂಥ ಸಂದರ್ಭ ಇದೆ. ನಾವು ಇದಕ್ಕೆ ಯಾವರೀತಿಯಲ್ಲಿ ಲಕ್ಷ್ಮಣ ಗೆರೆ ಹಾಕಬೇಕು ಈ ಗೆರೆಯನ್ನು ದಾಟಿ ಆ ಕಡೆ ಹೋಗಬಾರದು ಎನ್ನುವ ಚಿಂತನೆಯನ್ನು ನಾವು ಇಟ್ಟುಕೊಳ್ಳುವುದಕ್ಕೆ ಒಂದು ಗುರಿ ಹಾಕಬೇಕಾಗಿದೆ. ಇದಕ್ಕೆ ಸಕಾರಣವೂ ಇರಬೇಗಾಕುತ್ತದೆ ಕಾರಣವೂ ಇರಬೇಕಾಗುತ್ತದೆ. ಸುಮ್ಮಸುಮ್ಮನೆ ಗೆರೆ ಹಾಕಿ ದಾಟಬಾರದು ಎಂದು ಹೇಳಿದರೆ ಅದು ಅರ್ಥಹೀನವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಆಡಿದ್ದೇನೆ. ಮಾನ್ಯ ಸಭಾಧ್ಯಕ್ಷರೇ ಈಗ ವಿರೋಧಪಕ್ಷದ ನಾಯಕರು ಮಿತ್ರರು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಆ ಸಲಹೆಯನ್ನು ಸರ್ಕಾರ ಒಪ್ಪುತ್ತದೆ. ಜಂಟಿ ಸಲಹಾ ಸಮಿತಿಗೆ ಆ ಸದನ ಈ ಸದನ ಸೇರಿ ಸದಸ್ಯರನ್ನು ನೇಮಕ ಮಾಡೋಣ. ಸದಸ್ಯರನ್ನು ಹಾಗೂ ಅಧ್ಯಕ್ಷರನ್ನು ನೇಮಕ ಮಾಡಿ ಈ ಕೆಲಸವನ್ನು ಆ ಸಮಿತಿಗೆ ಒಪ್ಪಿಸೋಣ. ಮುಂದಿನ ಸದನ ಸೇರುವ ಹೊತ್ತಿಗೆ ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಮಾಡೋಣ ಮುಂದೆ ಜಂಟಿ ಸಲಹಾ ಸಮಿತಿಯವರು ಕೊಡುವ ಸಲಹೆಗಳು ಸಹ ವ್ಯತ್ಯಾಸ ಆಗಬಹುದು.

on the positive side. ಬರತಕ್ಕಂಥ ಸಂದರ್ಭಗಳು ಇವೆ. ಆದಕ್ಕಾಗಿ ನಾನು ಹೇಳಿದೆ. ಇದು ಒಂದು ಪ್ರಯೋಗ ಎಂಬ ಮಾತನ್ನು ಹೇಳಿದೆ. It is a matter of argument for and against on the positive side. ಪ್ರಯೋಗ ಮಾಡಬೇಕೆಂಬ ಸದಿಚ್ಛೆಯಿಂದ ಹೋಗುತ್ತಿದ್ದೇವೆ. ಆದಕ್ಕಾಗಿ ಈ ಮಾತನ್ನು ಹೇಳಿದ್ದೇನೆ. ಆದ್ದರಿಂದ ಸರ್ಕಾರ ಇದಕ್ಕೆ ಒಪ್ಪಿದೆ ಇನ್ನು ಮೇಲೆ ತಾವು ಮುಂದಿನ ಕಾರ್ಯಕ್ರಮ ಹಾಕಬಹುದು. ನಮ್ಮ ಅಭಿಪ್ರಾಯವನ್ನು ಈ ಸಂಬಂಧದಲ್ಲಿ ಹೇಳಿದ್ದೇನೆ. ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಪ್ರಸ್ತಾವವನ್ನು ಸಭೆಯ ಮುಂದಿಡುತ್ತೇನೆ.

ಸದನ ಸಮಿತಿ ರಚನೆಯ ಬಗ್ಗೆ ಪ್ರಸ್ತಾವನೆ

ಮಾನ್ಯ ಅಧ್ಯಕ್ಷರೇ 1991ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕವನ್ನು 12 ಜನ ವಿಧಾನ ಸಭೆಯ ಹಾಗೂ 4 ಜನ ವಿಧಾನ ಪರಿಷತ್ತಿನ ಒಟ್ಟು 16 ಜನ ಸದಸ್ಯರಿರುವ ಸದನದ ಸಂಯುಕ್ತ ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಆದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂದು ಮತ್ತು ಈ ಕೆಲಕಂಡ ಈ ಸದನದ ಮಾನ್ಯ ಸದಸ್ಯರು ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಿರಬೇಕೆಂದು ಹಾಗೂ ಸಮಿತಿಯ ವರದಿಯನ್ನು 31ನೇ ಮಾರ್ಚ್ 1992ರ ಒಳಗಾಗಿ ಸದನಕ್ಕೆ ಮಂಡಿಸಬೇಕೆಂದು ಪ್ರಸ್ತವವನ್ನು ಸದನದ ಒಪ್ಪಿಗೆಗಾಗಿ ಸಭೆಯ ಮುಂದಿಡುತ್ತೇನೆ.

ಶ್ರೀಯುತರುಗಳಾದ:

1) ಎಂ. ವೀರಪ್ಪಮೊಯಿಲಿ
2) ಎ.ಬಿ. ಜಕನೂರ್
3) ಶ್ರೀಮತಿ ಸುಮಾವಸಂತ
4) ಜಿ.ಎಸ್. ಆಚಾರ್
5) ಎ.ಟಿ. ರಾಮಸ್ವಾಮಿ
6) ಕಾಗೋಡು ತಿಮ್ಮಪ್ಪ
7) ಸಗೀರ್ ಅಹಮದ್
8) ಹೆಚ್ ವಿಕಾಂತಯ್ಯ
9) ಬಿ.ಹೆಚ್. ಬನ್ನಿಕೋಡ್
10) ನಾರಾಯಣರಾವ್ ಮನಹಳ್ಳಿ
11) ಎಂ.ಪಿ.ವೆಂಕಟೇಶ್
12) ಪ್ರೊ ಎಂ.ಡಿ. ನಂಡುಂಡಸ್ವಾಮಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 199ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕವನ್ನು ಜಂಟಿ ಸಲಹಾ ಸಮಿತಿಗೆ ಒಪ್ಪಿಸುವುದು ಹಾಗೂ ಜಂಟಿ ಸಲಹಾ ಸಮಿತಿಯ ಪ್ರಸ್ತಾವವನ್ನು ಅಂಗೀಕರಿಸುವುದು.

1) ಎಂ. ವೀರಪ್ಪಮೊಯಿಲಿ
2) ಎ.ಬಿ. ಜಕನೂರ್
3) ಶ್ರೀಮತಿ ಸುಮಾವಸಂತ
4) ಜಿ.ಎಸ್. ಆಚಾರ್
5) ಎ.ಟಿ. ರಾಮಸ್ವಾಮಿ
6) ಕಾಗೋಡು ತಿಮ್ಮಪ್ಪ
7) ಸಗೀರ್ ಅಹಮದ್
8) ಹೆಚ್ ವಿಕಾಂತಯ್ಯ
9) ಬಿ.ಹೆಚ್. ಬನ್ನಿಕೋಡ್
10) ನಾರಾಯಣರಾವ್ ಮನಹಳ್ಳಿ
11) ಎಂ.ಪಿ .ವೆಂಕಟೇಶ್
12) ಪ್ರೊ ಎಂ.ಡಿ. ನಂಡುಂಡಸ್ವಾಮಿ